23 ಸೆಪ್ಟೆಂಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 194 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ವೆಸ್ಟ್ ಇಂಡೀಸ್ ವಿರುದ್ಧ ಆರಂಭವಾಗಲ್ಲಿರುವ ಟೆಸ್ಟ್ ಪಂದ್ಯಕ್ಕೆ ಕರುಣ್ ನಾಯರ್ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವ ಸಾಧ್ಯತೆ ಇದೆ...



ಹಿರಿಯರಿಗೂ ಇಂದಿನ ಪೀಳಿಗೆಗೂ ಇರುವ ಅಂತರ ದಾಟುವುದು ಹೇಗೆ ? » 2



ಹಾಸನದಲ್ಲಿ ಅರ್ಥಪೂರ್ಣ ಬಸವ ಸಂಸ್ಕೃತಿ ಅಭಿಯಾನ » 3



ಜಾತಿ ಗಣತಿ ತಡೆಯಾಜ್ಞೆಗೆ ಹೈಕೋರ್ಟ್ ನಕಾರ » 4

## ಹಾಸನಕ್ಕಿಂದು ಸಚಿವರ ಭೇಟಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಹಾಗು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಸೆ.23ರಂದು ನಗರಕ್ಕೆ ಭೇಟಿ ನೀಡಲಿದ್ದಾರೆ.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಬೆಳಿಗ್ಗೆ 10.30 ರಿಂದ ಸಂಜೆ 5ರ ವರೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಮಧ್ಯಾಹ್ನ 3 ಗಂಟೆಗೆ ಸಾಲಗಾಮೆ ರಸ್ತೆಯ ಮಲೆನಾಡು ಇಂಜಿನೀಯರಿಂಗ್ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿರುವ ಜಿಲ್ಲೆಯ ವಿವಿಧ ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮತ್ತು ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಸಂಜೆ 5 ಗಂಟೆಗೆ ಹಳೇ ಅಂಚೆ ಕಚೇರಿ ರಸ್ತೆಯ ಡಬಲ್ ಟ್ಯಾಂಕ್ ಮುಂಭಾಗ ಆಯೋಜಿಸಿರುವ ರಾಜ್ಯ ಮಟ್ಟದ ಆರೋಗ್ಯ ಇಲಾಖೆಯ ಹೊರಗುತ್ತಿಗೆ ನೌಕರರ ಕೇಂದ್ರ ಕಚೇರಿ ಉದ್ಘಾಟನೆ ಮತ್ತು ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು.

# ದ್ವೇಷ, ಅಸಹಿಷ್ಣುತೆ ನಾಶವಾಗಲಿ

## ಹಿಂದೂ ಸಂಪ್ರದಾಯದಂತೆ ದಸರಾ ಉದ್ಘಾಟಿಸಿದ ಸಾಹಿತಿ ಬಾನು ಮುಷ್ತಾಕ್

• ಪ್ರಜೋದಯ ವರದಿ

**ಮೈಸೂರು:** ಪೊಲೀಸರ ಬಿಗಿ ಭದ್ರತೆ, ಅಘೋಷಿತ ನಿಷೇಧಾಜ್ಞೆ ನಡುವೆ ಚಾಮುಂಡಿ ಬೆಟ್ಟದಲ್ಲಿ ಸೋಮವಾರ ಉದ್ಘಾಟನೆಗೊಂಡ ನಾಡಹಬ್ಬ ದಸರಾ ಉತ್ಸವವು, ರಾಜ್ಯದಲ್ಲಿ ಕೋಮು ಸೌಹಾರ್ದ, ಧಾರ್ಮಿಕ ಸಹಿಷ್ಣತೆ ಮತ್ತು ಭಾಷಾ ಸಾಮರಸ್ಯದ ಅಗತ್ಯವನ್ನು ಸಾರಿ ಹೇಳಿತು. ಜೈ ಹಿಂದ್, ಜೈ ಕರ್ನಾಟಕದ ಜೊತೆಗೆ ಜೈ ಸಂವಿಧಾನ ಎಂಬ ಘೋಷಣೆಯೂ ಮೊಳಗಿದವು.

ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಳಿಕ ದಸರಾ ಉದ್ಘಾಟಿಸಲು ಆಯ್ಕೆಯಾದ ದಿನದಿಂದಲೂ ನಾಡಿನಾದ್ಯಂತ ಗಮನ ಸೆಳೆದು, ವಿರೋಧಿಗಳಿಗೆ ಸಂವಿಧಾನದ ಪ್ರಸ್ತಾವನೆಯನ್ನು ಸುಪ್ರೀಂಕೋರ್ಟ್ ನೆನಪಿಸುವ ಸನ್ನಿವೇಶಕ್ಕೂ ಕಾರಣವಾಗಿದ್ದ ಲೇಖಕಿ ಬಾನು ಮುಷ್ತಾಕ್, ನಾಡದೇವಿ ಚಾಮುಂಡೇಶ್ವರಿ ಮೂರ್ತಿಗೆ ದೀಪ ಬೆಳಗಿ, ಪುಷ್ಪಾರ್ಚನೆ ಮಾಡಿ ಉತ್ಸವಕ್ಕೆ ಚಾಲನೆ ನೀಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಆದಿಯಾಗಿ ಮಾತನಾಡಿದ ಎಲ್ಲರೂ ಸೌಹಾರ್ದವನ್ನೇ ಪ್ರತಿಪಾದಿಸಿದರು.

» ನಾಲ್ಕನೇ ಪುಟದಲ್ಲಿ



### ಮಂಗಳಾರತಿ ಪಡೆದು ಪ್ರಸಾದ ಸ್ವೀಕಾರ

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರು, ಹಳದಿ ಮೈಸೂರು ರೇಷ್ಮೆ ಸೀರೆ, ತಲೆಗೆ ಮೈಸೂರು ಮಲ್ಲಿಗೆ ಮುಡಿದು ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರ ಜೊತೆ ದೇವಸ್ಥಾನಕ್ಕೆ ಆಗಮಿಸಿದರು. ಗರ್ಭಗುಡಿ ಮುಂಭಾಗದ ಆವರಣದಲ್ಲಿ ನಿಂತು ತಾಯಿ ಚಾಮುಂಡಿ ದರ್ಶನ ಪಡೆದರು. ನಂತರ ಗಣಪತಿಗೆ ಕೈ ಮುಗಿದು, ಮಂಗಳಾರತಿ ಪಡೆದು ಪ್ರಸಾದ ಸ್ವೀಕರಿಸಿದರು. ಚಾಮುಂಡಿ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ನಗರದ ಎಲ್ಲಾ ರಸ್ತೆ, ವೃತ್ತಗಳಲ್ಲೂ ಇದೇ ಮೊದಲ ಬಾರಿಗೆ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿತ್ತು. ನೂರಾರು ಪೊಲೀಸರು ಬಾನು ಮುಷ್ತಾಕ್ ಅವರಿಗೆ ರಕ್ಷಣೆ ನೀಡಿ ಬೆಟ್ಟಕ್ಕೆ ಕರೆತಂದರು. ಅವರ ಕುಟುಂಬಸ್ಥರಿಗೆಂದೇ ಪ್ರತ್ಯೇಕ ಬಸ್ ವ್ಯವಸ್ಥೆ ಮಾಡಲಾಗಿತ್ತು.

### ಓಲೈಕೆ ರಾಜಕಾರಣ ಬೇಡ: ಸಿದ್ದರಾಮಯ್ಯ

ಯಾರನ್ನೋ ಓಲೈಸಿ, ರಾಜಕಾರಣ ಮಾಡಲು ನಾಡಹಬ್ಬವನ್ನು ವಿರೋಧಿಸುವುದು ಸಂವಿಧಾನಕ್ಕೆ, ದೇಶಕ್ಕೆ ಮಾಡುವ ಅಪಚಾರ, ಅಕ್ಷಮ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಪಾದಿಸಿದರು.
ರಾಜಕಾರಣ ಮಾಡಲು ಬೇರೆ ಸ್ಥಳ, ಸಂದರ್ಭಗಳಿವೆ. ಗೋಡಾ ಹೈ, ಮೈದಾನ್ ಹೈ. ಚುನಾವಣೆ ಸಂದರ್ಭದಲ್ಲಿ ರಾಜಕಾರಣ ಮಾಡಬೇಕೇ ಹೊರತು, ದಸರೆಯಂತಹ ಉತ್ಸವದಲ್ಲಿ ಅಲ್ಲ. ಬಾನು ಮುಷ್ತಾಕ್ ಅವರು ದಸರೆ ಉದ್ಘಾಟಿಸಿದ್ದು ಸರಿಯಾಗಿಯೇ ಇದೆ ಎಂದು ಮತ್ತೊಮ್ಮೆ ಸಮರ್ಥಿಸಿಕೊಂಡರು.

# ಇಂದಿನಿಂದ ಮನೆ-ಮನೆಗೆ ಗಣತಿದಾರರ ಭೇಟಿ

• ಪ್ರಜೋದಯ ವರದಿ

**ಹಾಸನ:** ಸಾಮಾಜಿಕ-ಶೈಕ್ಷಣಿಕ ಸಮೀಕ್ಷಾ ಕಾರ್ಯಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಿದ್ಧವಾಗಿದ್ದು, ಮೊದಲ ದಿನವಾದ ಸೋಮವಾರ ಎಲ್ಲಾ ಸಮೀಕ್ಷೆದಾರರಿಗೆ ಕಿಟ್ ವಿತರಣೆ ಹಾಗು ಅಂತಿಮ ಹಂತದ ತರಬೇತಿ ನೀಡಲಾಯಿತು.

60 ಪ್ರಶ್ನೆಗಳನ್ನು ಒಳಗೊಂಡಿರುವ ಆ್ಯಪ್‌ನ್ನು ಸರ್ಕಾರ ರಚಿಸಿದ್ದು, ಆ ಮೂಲಕವೇ ಗಣತಿ ನಡೆಯಲಿದೆ. ಮಂಗಳವಾರ ಬೆಳಿಗ್ಗೆಯಿಂದ ಮನೆ-ಮನೆಗೆ ಸಮೀಕ್ಷೆದಾರರು ಭೇಟಿ ನೀಡಿ ಮಾಹಿತಿ ಕಲೆ ಹಾಕಲಿದ್ದಾರೆ. ಈ ಹಿಂದೆ ನಡೆಸಿದ ಪರಿಶಿಷ್ಟ ಜಾತಿ ಸಮೀಕ್ಷೆಗೆ ಅಳವಡಿಸಿಕೊಂಡಿದ್ದ ಆ್ಯಪ್‌ಗಿಂತ ಪ್ರಸ್ತುತ ಆ್ಯಪ್ ಸರಳವಾಗಿದ್ದು, ಶಿಕ್ಷಕರಿಗೆ ಸುಲಭವಾಗಿ ಅರ್ಥವಾಗದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಗಣತಿಗೆ ನಿಯೋಜನೆಗೊಂಡಿರುವ ಶಿಕ್ಷಕರು ಅದರ ಫಲಿತಾಂಶ ಗೊತ್ತಾಗಲು ಕಾರ್ಯಕ್ಷೇತ್ರಕ್ಕೆ ಭೇಟಿ ನೀಡಬೇಕೆಂದಿದ್ದಾರೆ.

**ಕಾರ್ಯ ಕ್ಷೇತ್ರದಾಚೆಗೆ ಜವಾಬ್ದಾರಿ**

ಜಾತಿ ಸಮೀಕ್ಷೆಗೆ ಆಯಾ ಭಾಗದ ಶಿಕ್ಷಕರನ್ನು ಬಿಎಲ್‌ಒಗಳನ್ನಾಗಿ ನಿಯೋಜಿಸಲಾಗುತ್ತದೆ. ಅವರು ಅದೇ ಭಾಗದಲ್ಲಿ ಕೆಲವು ವರ್ಷಗಳಿಂದ ಶಿಕ್ಷಕರಾಗಿ ಕೆಲಸ ಮಾಡಿರುವುದರಿಂದ ಗ್ರಾಮದ ಮನೆ ವಿಳಾಸ, ಕುಟುಂಬಸ್ಥರ ಪೂರ್ವಾಪರ ಎಲ್ಲವೂ ತಿಳಿದಿರುತ್ತದೆ. ಆದರೆ, ಸದ್ಯದ ಸಮೀಕ್ಷೆಗೆ ನಿಯೋಜನೆಗೆ ಬೇರೆ ಬಿಎಲ್‌ಒಗಳ ನಿಯೋಜಿಸಿದ್ದು, ಗೊಂದಲಕ್ಕೆ ಎಡೆ ಮಾಡಿಕೊಟ್ಟಿದೆ. ಗಣತಿದಾರರು ತಾವು ಭೇಟಿ ನೀಡುವ ಸ್ಥಳದ ಲೋಕೇಶನ್ ಸಹ ಆ್ಯಪ್ ತೋರಿಸುವುದರಿಂದ ಸಮಸ್ಯೆಯಾಗುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಜೊತೆಗೆ ನೆಟ್‌ವರ್ಕ್ ಇಲ್ಲದ ಸ್ಥಳಗಳಲ್ಲಿ ಹೇಗೆ ತಲುಪುವುದೆಂಬ ಪ್ರಶ್ನೆಯು ಶಿಕ್ಷಕರನ್ನು ಕಾಡುತ್ತಿದೆ.

ಪ್ರತಿ ಕುಟುಂಬಕ್ಕೆ ಭೇಟಿ ನೀಡಿ 60 ಪ್ರಶ್ನೆಗಳನ್ನು ಕೇಳಬೇಕು. ಒಬ್ಬ ಶಿಕ್ಷಕರಿಗೆ 140 ಮನೆ, ಮತ್ತೊಬ್ಬರಿಗೆ ಕೇವಲ 70, 100 ಹೀಗೆ ವಿಂಗಡಣೆ ಮಾಡಲಾಗಿದೆ. ಕೆಲವರಿಗೆ ಹೆಚ್ಚು ಮತ್ತೆ ಕೆಲವರಿಗೆ ಕಡಿಮೆ ಮನೆಗಳ ಗಣತಿಗೆ ಹಾಕಿದ್ದು, ಗೊಂದಲಕ್ಕೆ ಕಾರಣವಾಗಿದೆ. ಆನ್‌ಲೈನ್‌ನಲ್ಲೇ ಸಮೀಕ್ಷೆ ಮಾಡಬೇಕಿರುವುದರಿಂದ ಆ್ಯಪ್ ಯಾವ ರೀತಿ ಸ್ಪಂದಿಸುತ್ತದೆಂಬುದು ಕುತೂಹಲ ಕೆರಳಿಸಿದೆ. ಸರ್ಕಾರ ಸೆ.22 ರಿಂದ ಅ.7ರ ವರೆಗೆ ಅವಕಾಶ ಕಲ್ಪಿಸಿದೆ. ಇಷ್ಟು ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಿಲ್ಲವೆಂಬ ಮಾತುಗಳು ಕೇಳಿ ಬಂದಿವೆ.

**ಅರ್ಹರಿಗೆ ಅವಕಾಶ ಕೊಡಬಹುದಿತ್ತು**

ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಗೆ ಶಿಕ್ಷಕರ ಬದಲಿಗೆ ಅರ್ಹ ಪದವೀಧರರನ್ನು ನೇಮಿಸಿದ್ದರೆ ಅಲ್ಪ ದುಡಿಮೆಯಾದರೂ ಆಗುತ್ತಿತ್ತು. ಶಿಕ್ಷಕರ ದಸರಾ ರಜೆ ಕಡಿತಗೊಳಿಸಿರುವುದು ಖಂಡನೀಯ. ಪದವಿ ಪೂರೈಸಿದ ಆಶಾ ಕಾರ್ಯಕರ್ತರು ಅಥವಾ ಗ್ರಾಮದಲ್ಲಿ ಪದವಿ ಪಡೆದ ಯುವಕ-ಯುವತಿಯರನ್ನು ಬಳಸಿಕೊಂಡಿದ್ದರೆ ಅವರ ದುಡಿಮೆಗೆ ನೆರವಾಗುತ್ತಿತ್ತು ಎಂಬುದು ಶಿಕ್ಷಕರ ಅಭಿಪ್ರಾಯ. ಜಿಲ್ಲಾದ್ಯಂತ 5,37,325 ಕುಟುಂಬಗಳು ಸಮೀಕ್ಷೆಗೆ ಒಳಪಡಿಸಲಿವೆ. ಈಗಾಗಲೇ ಎಲ್ಲಾ ಮನೆಗಳಿಗೆ ಸೆಸ್ಕಾಂ ವತಿಯಿಂದ ಸ್ಟಿಕ್ಕರ್ ಹಾಗು ಜಿಯೋ ಟ್ಯಾಗ್ ಅಳವಡಿಸಲಾಗಿದೆ. ಸಮೀಕ್ಷೆಯಿಂದ ಯಾರೂ ಹೊರಗುಳಿಯಬಾರದೆಂದು ಸರ್ಕಾರ ಕಟ್ಟು ನಿಟ್ಟಿನ ಕ್ರಮ ಕೈಗೊಂಡಿದೆ. ಗಣತಿ ವೇಳೆ ಸಾರ್ವಜನಿಕರಿಗೆ ಸಮಸ್ಯೆಯಾದರೂ ನೆರವಿಗಾಗಿ ಜಿಲ್ಲಾ ಡಳಿತ ಸಹಾಯವಾಣಿ ತೆರೆದಿದೆ. ಕಚೇರಿ ವೇಳೆ ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ ದೂರವಾಣಿ ಸಂಖ್ಯೆ 08172-295108 ಇಲ್ಲಿಗೆ ಕರೆ ಮಾಡಬಹುದು.

# ವ್ಯಾಪಾರಿಗಳಿಗಾಗಿ ಶಾಸಕರ ಮನೆಗೆ ಹೋಗುವೆ

• ಪ್ರಜೋದಯ ವರದಿ



**ಹಾಸನ:** ನಗರದ ಕಟ್ಟಿನಕೆರೆ ಮಾರುಕಟ್ಟೆ ಮಳಿಗೆ ಹಂಚಿಕೆ ಇ-ಹರಾಜು ಆಗಬೇಕು ಹಾಗು ಮೂಲ ವ್ಯಾಪಾರಿಗಳಿಗೆ ಸಿಗಬೇಕೆನ್ನುವುದು ನನ್ನ ಆದ್ಯತೆ. ಅದಕ್ಕಾಗಿ ಶಾಸಕ ಹೆಚ್.ಪಿ. ಸ್ವರೂಪ್ ಅವರ ಮನೆಗೆ ಭೇಟಿ ನೀಡಲು ಸಿದ್ದನಿದ್ದೇನೆ. ಈ ವಿಚಾರದಲ್ಲಿ ಜಗತ್ತು ಪ್ರಳಯವಾದರೂ ಬಡವರಿಗೆ ತೊಂದರೆಯಾಗಲು ಬಿಡುವುದಿಲ್ಲವೆಂದು ಮಾಜಿ ಶಾಸಕ ಪ್ರೀತಮ್ ಜೆ. ಗೌಡ ವಾಗ್ದಾನ ನೀಡಿದರು.

ಸೋಮವಾರ ಸಂಜೆ ಕಟ್ಟಿನಕೆರೆ ಮಾರುಕಟ್ಟೆಗೆ ಭೇಟಿ ನೀಡಿದ ಅವರು, ಮಾರುಕಟ್ಟೆಯಲ್ಲಿ 487 ಅಂಡಿಗಳಿದ್ದು, ಇ-ಹರಾಜು ಆಗಬೇಕೇನ್ನುವುದು ವ್ಯಾಪಾರಿಗಳ ಬೇಡಿಕೆಯಾಗಿದೆ. ಮಂಗಳವಾರ ಬೆಳಿಗ್ಗೆ 10 ಗಂಟೆ ವೇಳೆಗೆ ಸಮಸ್ಯೆ ನಿವಾರಣೆಯಾಗುತ್ತ ಎಂದ ಅವರು, ನಾನು ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎಂದು ಹೇಳಿಕೊಂಡು ಬಂದಿಲ್ಲ. ನನ್ನನ್ನು ಪ್ರೀತಿ ಮಾಡುವವರು ಇರುವಷ್ಟು ದ್ವೇಷಿಸುವವರೂ ಇದ್ದಾರೆ. ನನಗೆ ಅದು ಯಾವತ್ತಿಗೂ ಮುಖ್ಯವಾಗುವುದಿಲ್ಲ. ಹತ್ತಾರು ವರ್ಷಗಳಿಂದ ಇಲ್ಲಿಯೇ ಜೀವನ ಕಟ್ಟಿಕೊಂಡಿರುವವರಿಗೆ ಅನ್ಯಾಯವಾಗಬಾರದು. ನಾನು ಮತ ಕೇಳಲು ಇಲ್ಲಿಗೆ ಬಂದಿಲ್ಲ. ಅದಕ್ಕೆ ಇನ್ನೂ ಮೂರು ವರ್ಷ ಸಮಯವಿದೆ ಎಂದರು.

ಹರಾಜು ಪ್ರಕ್ರಿಯೆಯಲ್ಲಿ ವ್ಯಾಪಾರಿಗಳಿಗೆ ಅನ್ಯಾಯವಾಗದಂತೆ ಕ್ರಮ ವಹಿಸಲು ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಅವರೊಂದಿಗೆ ಮಾತನಾಡುತ್ತೇನೆ. ನೀವು ಒಪ್ಪಿದರೆ ಈಗಲೇ ಶಾಸಕರ ಮನೆಗೆ ಬರುತ್ತೇನೆ. ಈ ನಿಟ್ಟಿನಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ. ಜಗತ್ತು ಪ್ರಳಯವಾದರೂ ನಿಮ್ಮ ಜೊತೆ ಇರುತ್ತೇನೆ. ನಾನು ಯಾವುದೇ ಮುಲಾಜಿಗೆ ಒಳಗಾಗುವುದಿಲ್ಲ. ಇಲ್ಲಿ ಮಳಿಗೆ ಬೇಕೆಂದು ಹೊರಗಡೆಯವರು ಬಂದರೆ ಅವರಿಗೆ ಕಾಫಿ, ಟೀ ಕೊಟ್ಟು ಸಮಾಧಾನ ಮಾಡಿಸೋಣ, ಅದಕ್ಕೆ ಒಪ್ಪದಿದ್ದರೆ ಪಕ್ಕಕ್ಕೆ ಕರೆದುಕೊಂಡು ಹೇಳುವ ಕೆಲಸ ಮಾಡುತ್ತೇನೆಂದು ಎಚ್ಚರಿಕೆ ನೀಡಿದರು.

ಸಂಸದ, ಶಾಸಕರಿಗಿಂತ ದೊಡ್ಡವರು ಯಾರೂ ಇಲ್ಲ. ಮೂಲ ವ್ಯಾಪಾರಿಗಳಿಗೆ ಅನುಕೂಲವಾಗಲಿ ಎಂಬುದಷ್ಟೇ ನನ್ನ ಉದ್ದೇಶ. ಇದರಲ್ಲಿ ರಾಜಕೀಯ ಬೆರೆಸುವ ಅವಶ್ಯಕತೆ ಇಲ್ಲವೆಂದರು. ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಹಾಗು ಬಿಜೆಪಿ ಮುಖಂಡರಿದ್ದರು.

# ಬೇಲೂರು ಬಂದ್‌ಗೆ ಬೆಂಬಲ: ವಾಹನ ಸಂಚಾರ ಸಹಜ

## ಮಧ್ಯಾಹ್ನದ ವರೆಗೆ ವ್ಯಾಪಾರ-ವಹಿವಾಟು ಸ್ಥಗಿತ | ಹಿಂದೂಪರ ಸಂಘಟನೆಗಳಿಂದ ಮೆರವಣಿಗೆ

• ಪ್ರಜೋದಯ ವರದಿ



**ಬೇಲೂರು:** ಪಟ್ಟಣದ ಪುರಸಭೆ ಆವರಣದಲ್ಲಿರುವ ವರಸಿದ್ಧಿ ವಿನಾಯಕ ದೇವಾಲಯದ ಗಣೇಶಮೂರ್ತಿಗೆ ಚಪ್ಪಲಿ ಹಾಕಿ ಅವಮಾನ ಮಾಡಿದ್ದನ್ನು ಖಂಡಿಸಿ ಸೋಮವಾರ ಹಿಂದೂಪರ ಸಂಘಟನೆಗಳು ಕರೆ ನೀಡಿದ್ದ ಪಟ್ಟಣ ಬಂದ್‌ಗೆ ಬೆಂಬಲ ವ್ಯಕ್ತ ವಾಯಿತು.

ಪಟ್ಟಣದ ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಬಳಿಯಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು, ಬಸವೇಶ್ವರ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ವಾಹನಗಳನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು. ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ ಆರೋಪಿ ಮಹಿಳೆಯ ಹಿಂದೆ ಯಾರ ಕೈವಾಡವಿದೆ ಎಂದು ಬಹಿರಂಗಪಡಿಸಬೇಕೆಂದು ಒತ್ತಾಯಿಸಿದರು. ಮತ್ತೊಂದೆಡೆ ದೇವಾಲಯ ಶುದ್ಧಿಕಾರ್ಯ ಮಾಡಿ ಹೋಮ, ಹವನ ನಡೆಸಲಾಯಿತು.

ಗಣೇಶಮೂರ್ತಿಗೆ ಚಪ್ಪಲಿ ಹಾಕಿದ ಪ್ರಕರಣದ ಸಂಬಂಧ ಹಾಸನದ ವಿಜಯನಗರ ಬಡಾವಣೆಯ ನಿವಾಸಿ ಮಾನಸಿಕ ಅಸ್ವಸ್ಥೆ ಲೀಲಮ್ಮ ಎಂಬುವವರನ್ನು ಭಾನುವಾರ ಸಂಜೆಯೇ ಪೊಲೀಸರು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ. ಆದರೂ ಬಿಜೆಪಿ, ಭಜರಂಗದಳ, ವಿಶ್ವ ಹಿಂದೂ ಪರಿಷತ್ ಸಂಘಟನೆಗಳು ಸೋಮವಾರ ಮಧ್ಯಾಹ್ನ ಒಂದು ಗಂಟೆಯವರೆಗೂ ಬಂದ್‌ಗೆ ಕರೆ ನೀಡಿದ್ದವು. ವಾರದ ಸಂತೆ ದಿನವಾದರೂ ಬೆಳಿಗ್ಗೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಪಟ್ಟಣದಲ್ಲಿರುವ ಎಲ್ಲಾ ಅಂಗಡಿ ಮುಗ್ಗಟ್ಟುಗಳು ಸಂಪೂರ್ಣ ಮುಚ್ಚುವ ಮೂಲಕ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದವು. ಸಾರಿಗೆ ಬಸ್, ಸೇರಿ ಎಲ್ಲಾ ರೀತಿಯ ವಾಹನಗಳ ಸಂಚಾರ ಎಂದಿನಂತೆ ಇದ್ದು, ಕಾಲೇಜುಗಳು ತೆರೆದಿದ್ದವು.

ಚನ್ನಕೇಶವಸ್ವಾಮಿ ದೇವಾಲಯದಿಂದ ಆವರಣದಿಂದ ಮಂಗಳವಾದ್ಯಗಳೊಂದಿಗೆ ಕೇಸರಿ ಧ್ವಜ ಹಿಡಿದು ಪ್ರತಿಭಟನಾ ಮೆರವಣಿಗೆ ಹೊರಟ ನೂರಾರು ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಘೋಷಣೆಗಳನ್ನು ಕೂಗಿ ಘಟನೆಯನ್ನು ಖಂಡಿಸಿದರು. ದೇವಾಲಯದ ಶುದ್ಧಿಗಾಗಿ ಅರ್ಚಕರು ದ್ವಾರ ಸಮುದ್ರದಿಂದ ನೀರು ಹೊತ್ತು ಮೆರವಣಿಗೆಯಲ್ಲಿ ಸಾಗಿದರು.

ಆರೋಪಿಯನ್ನು ಮಾನಸಿಕ ಅಸ್ವಸ್ಥೆ ಎಂದು ಹೇಳುತ್ತಿದ್ದಾರೆ. ಆದರೆ, ಘಟನೆ ನಡೆದಿರುವುದನ್ನು ಗಮನಿಸಿದರೆ ಆಕೆಯ ಕೈಯಲ್ಲಿ ಯಾರೋ ಕಿಡಿಗೇಡಿಗಳ ಈ ಕೃತ್ಯ ಮಾಡಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ಪ್ರಕರಣದ ಹಿಂದಿರುವ ಕಾಣದ ಕೈಗಳನ್ನು ಬಂಧಿಸಬೇಕು. ಇಂತಹ ಘಟನೆಗಳು ಮರುಕಳುಹಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಮುಂಜಾಗ್ರತಾ ಕ್ರಮವಾಗಿ ಪಟ್ಟಣದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಮಧ್ಯಾಹ್ನ ಒಂದು ಗಂಟೆ ನಂತರ ಪಟ್ಟಣದಲ್ಲಿ ವ್ಯಾಪಾರ ವಹಿವಾಟು ಯಥಾಸ್ಥಿತಿಗೆ ತಲುಪಿತು.

### ದೇಗುಲ ಶುದ್ಧಿ ಕಾರ್ಯ

ಶಾಸಕ ಹೆಚ್.ಕೆ.ಸುರೇಶ್ ಅವರ ನೇತೃತ್ವದಲ್ಲಿ ದೇಗುಲ ಶುದ್ಧಿ ಕಾರ್ಯ ನಡೆಸಲಾಯಿತು. ಗಣೇಶಮೂರ್ತಿಗೆ ಹಾಲು, ಮೊಸರು, ತುಪ್ಪ, ಹಣ್ಣುಗಳಿಂದ ಅಭಿಷೇಕ ಮಾಡಲಾಯಿತು. ಬಳಿಕ ದೇವಾಲಯದ ಮುಂಭಾಗ ಧಾರ್ಮಿಕ ವಿಧಿ ವಿಧಾನಗಳಂತೆ ದೇವಾಲಯ ಶುದ್ಧಿ ಕಾರ್ಯ ಮಾಡಲಾಯಿತು. ಪೂಜೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಭಾಗಿಯಾಗಿದ್ದರು. ನಂತರ ದೇವರಿಗೆ ಮಹಾಮಂಗಳಾರತಿ ನೆರವೇರಿಸಲಾಯಿತು.

# ಶಿಲುಬೆ ಬೆಟ್ಟದಲ್ಲಿ ಗಣಿಗಾರಿಕೆ ತಡೆಗೆ ಆಗ್ರಹ

• ಪ್ರಜೋದಯ ವರದಿ



**ಹಾಸನ:** ಆಲೂರು ತಾಲ್ಲೂಕು ಹೊಸಮಠ ಗ್ರಾಮದ ಸರ್ವೆ ನಂ.151ರ ಕ್ರೈಸ್ತರ ಪವಿತ್ರ ಸ್ಥಳ ಶಿಲುಬೆ ಬೆಟ್ಟದಲ್ಲಿ ನಡೆಯುತ್ತಿರುವ ಗಣಿಗಾರಿಕೆ ವಿರೋಧಿಸಿ ಗ್ರಾಮಸ್ಥರು, ಕ್ರೈಸ್ತ ಧರ್ಮಗುರುಗಳು ಹಾಗು ರೈತಸಂಘದಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು, ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಧರಣಿ ನಡೆಸಿ, ಕಲ್ಲು ಗಣಿಕಾರಿಕೆ ತಡೆಯುವಂತೆ ಆಗ್ರಹಿಸಿದರು. ಜಯ ಬಸವಾನಂದ ಸ್ವಾಮೀಜಿ ಅವರು ಮಾತನಾಡಿ, ಗಣಿಗಾರಿಕೆ ಸ್ಫೋಟದಿಂದ ಸುತ್ತಮುತ್ತಲ ಮನೆಗಳಲ್ಲಿ ಬಿರುಕು ಕಾಣಿಸಿಕೊಂಡಿದೆ. ಭಾರೀ ವಾಹನ ಸಂಚಾರದಿಂದ ರಸ್ತೆಗಳು ಹಾಳಾಗಿವೆ. ಕಾಡು ಪ್ರಾಣಿಗಳು ಗ್ರಾಮಗಳಿಗೆ ನುಗ್ಗಿ ಬೆಳೆ ಹಾನಿ ಮಾಡುತ್ತಿವೆ. ಶಾಲಾ ಬಸ್‌ಗಳು ಹಾಳಾದ ರಸ್ತೆಯಲ್ಲಿ ಓಡಾಡಲು ಹಿಂದೇಟು ಹಾಕುತ್ತಿರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗಿದೆ ಎಂದು ದೂರಿದರು.

ಮಳೆಗಾಲದಲ್ಲಿ ಕಲುಷಿತ ನೀರು ಮತ್ತು ಧೂಳು ಹೊಲಗಳಿಗೆ ಹರಿದು ಕಾಫಿ, ಮೆಣಸು, ಭತ್ತದ ಬೆಳೆ ಹಾನಿಯಾಗುತ್ತಿದೆ. ಹೊಸಮಠ, ಕಲ್ಲು ಕೊಪ್ಪಲು, ಮಠದ ಕೊಪ್ಪಲು, ಹಾರೋಹಳ್ಳಿ, ನವಿಲಹಳ್ಳಿ, ಬಡಗಿ ಕೊಪ್ಪಲು, ದಿಣ್ಣೆಕೊಪ್ಪಲು ಮುಂತಾದ ಹಳ್ಳಿಗಳ ಜನತೆ ಗಣಿಗಾರಿಕೆ ನಿಲ್ಲಿಸಬೇಕೆಂದು ಒಗ್ಗಟ್ಟಿನಿಂದ ಧ್ವನಿ ಎತ್ತಿದ್ದಾರೆ ಎಂದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆನೆಕೆರೆ ರವಿ ಮಾತನಾಡಿ, ಕಲ್ಲು ಗಣಿಗಾರಿಕೆ ನಡೆಯುತ್ತಿರುವುದರಿಂದ ಗ್ರಾಮಸ್ಥರಿಗೆ ತೊಂದರೆ ಆಗುತ್ತಿತ್ತು. ಗ್ರಾಮದಲ್ಲಿ ಲಿಂಗಾಯತರು, ಸುತ್ತಮುತ್ತ ಕ್ರೈಸ್ತ ಜನಾಂಗದವರು ಇದ್ದೇವೆ.

» ನಾಲ್ಕನೇ ಪುಟದಲ್ಲಿ

## ಕಲಾವಿದ ಬಿ.ಎಸ್.ದೇಸಾಯಿ ಸೊಸೆ ಕಲ್ಪನಾ ಸಾವು

• ಪ್ರಜೋದಯ ವರದಿ



**ಬೆಂಗಳೂರು:** ಚಿತ್ಕಲಾ ಫೌಂಡೇಶನ್ ಅಧ್ಯಕ್ಷ, ಚಿತ್ರ ಕಲಾವಿದ ಬಿ.ಎಸ್. ದೇಸಾಯಿ ಅವರ ಸೊಸೆ ಕಲ್ಪನಾ (38) ಅವರು ಸೋಮವಾರ ಮೃತ ಪಟ್ಟಿದ್ದಾರೆ.

ಪ್ರಜಾವಾಣಿ ಪತ್ರಿಕೆಯ ಕಲಾವಿದ ಶಶಿಕಿರಣ ದೇಸಾಯಿ ಅವರ ಪತ್ನಿ ಕಲ್ಪನಾ ಪಿಣ್ಯ ಆದರ್ಶ ಎಲೆಕ್ಟ್ರಾನಿಕ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದರು. ನಂದಿನಿ ಲೇಔಟ್‌ನಲ್ಲಿ ಬೆಳಿಗ್ಗೆ 9 ಗಂಟೆಗೆ ನಾಲ್ಕು ವರ್ಷದ ಪುತ್ರಿ ಡಿಂಪನಾಳನ್ನು ಶಾಲೆಗೆ ಬಿಟ್ಟು ದ್ವಿಚಕ್ರ ವಾಹನದಲ್ಲಿ ಕಚೇರಿಗೆ ಹೋಗುತ್ತಿದ್ದಾಗ ಲಾರಿ ಡಿಕ್ಕಿಯಾಗಿದೆ. ಗಂಭೀರ ಗಾಯಗೊಂಡಿದ್ದ ಅವರನ್ನು ಸತ್ಯಸಾಯಿ ಕಣ್ವ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಹಾಸನದ ವಿದ್ಯಾನಗರದಲ್ಲಿರುವ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆಲೂರು ತಾಲ್ಲೂಕಿನ ಮಂಚೇನ ಹಳ್ಳಿಯಲ್ಲಿ ಮಂಗಳವಾರ ಬೆಳಿಗ್ಗೆ ಅಂತ್ಯಕ್ರಿಯೆ ನೆರವೇರಲಿದೆ.

## ಸೆ.25 ರಂದು ಸಾಮಾನ್ಯ ಸಭೆ

ಹಾಸನ : ಮಹಾನಗರ ಪಾಲಿಕೆಯ ಮಹಾಪೌರ ಗಿರೀಶ್ ಚನ್ನವೀರಪ್ಪ ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರಕವಿ ಕುವೆಂಪು ಸಭಾಂಗಣದಲ್ಲಿ ಸೆ.25 ರಂದು ಬೆಳಿಗ್ಗೆ 11 ಗಂಟೆಗೆ ಸಾಮಾನ್ಯ ಸಭೆಯನ್ನು ಆಯೋಜಿಸಲಾಗಿದೆ ಎಂದು ಮಹಾನಗರ ಪಾಲಿಕೆಯ ಆಯುಕ್ತ ಆರ್.ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ.




### ಸರ್ಕಾರದ ವಿರುದ್ಧ ಸಿಮೆಂಟ್ ಮಂಜು ಆಕ್ರೋಶ : ಹೋರಾಟದ ಎಚ್ಚರಿಕೆ

# ಎಸ್‌ಸಿ -ಕ್ರೈಸ್ತ ಜಾತಿಗಳ ಪಟ್ಟಿ ತೆಗೆಯದೆ ಕೊಳಕು ರಾಜಕಾರಣ

• ಪ್ರಜೋದಯ ವರದಿ



**ಹಾಸನ:** ಜಾತಿಗಣತಿಗೆ ಸಿದ್ದಪಡಿಸಿರುವ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಕ್ರಿಶ್ಚಿಯನ್ ಪಟ್ಟಿಯನ್ನು ತೆಗೆದು ಹಾಕದೆ ಕಾಂಗ್ರೆಸ್ ಸರ್ಕಾರ ಕೊಳಕು ರಾಜಕಾರಣ ಮಾಡುತ್ತಿದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷರೂ ಆದ ಶಾಸಕ ಸಿಮೆಂಟ್ ಮಂಜು ಅವರು ಆರೋಪಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮೀಕ್ಷೆಯ ಪಟ್ಟಿಯಲ್ಲಿ 48 ಹಿಂದೂ ಜಾತಿಗಳಲ್ಲಿ 15 ಎಸ್‌ಸಿ, 1 ಎಸ್‌ಟಿ ಜಾತಿಗಳಿದ್ದವು. ಈ ಬಗ್ಗೆ ರಾಜ್ಯಾದ್ಯಂತ ತೀವ್ರ ವಿರೋಧ ವ್ಯಕ್ತವಾದ ಹಿನ್ನಲೆ 33 ಹಿಂದೂ ಜಾತಿಗಳನ್ನು ಕ್ರೈಸ್ತ ಪಟ್ಟಿಯಿಂದ ಕೈಬಿಡಲಾಗಿದೆ. ಆದರೆ, ಪರಿಶಿಷ್ಟ ಜಾತಿಗಳನ್ನು ಹಾಗೆ ಬಿಡಲಾಗಿದೆ. ಈಗಲೂ ಆದಿ ಕರ್ನಾಟಕ ಕ್ರಿಶ್ಚಿಯನ್, ಆದಿ ಆಂಧ್ರ ಕ್ರಿಶ್ಚಿಯನ್, ಬಂಜಾರ ಕ್ರಿಶ್ಚಿಯನ್, ಹೊಲೆಯ ಕ್ರಿಶ್ಚಿಯನ್, ಲಮಾಣಿ ಕ್ರಿಶ್ಚಿಯನ್, ಮಾದಿಗ ಕ್ರಿಶ್ಚಿಯನ್, ವಾಲ್ಮೀಕಿ ಕ್ರಿಶ್ಚಿಯನ್ ಎಂದು ಸೇರಿಸಲಾಗಿದೆ ಎಂದು ದೂರಿದರು.

ಜಾತಿಗಣತಿ ನಡೆಸುತ್ತಿರುವ ಜವಾಬ್ದಾರಿಯುತ ಸಂಸ್ಥೆಯಾದ ಹಿಂದುಳಿದ ವರ್ಗಗಳ ಆಯೋಗವು 33 ಕ್ರೈಸ್ತ ಜಾತಿಗಳ ಬಗ್ಗೆ ಸ್ಪಷ್ಟನೆ ಕೊಟ್ಟು, ಉಳಿದ 13 ದಲಿತ ಕ್ರೈಸ್ತ ಜಾತಿಗಳ ಬಗ್ಗೆ ಮಾಹಿತಿ ನೀಡದೆ, ದಲಿತ ಸಮುದಾಯದ ಸಂಖ್ಯೆಯನ್ನು ಕಡಿಮೆ ಮಾಡುವ ಹುನ್ನಾರ ನಡೆಸಿದೆ. ಸೋಮವಾರದಿಂದ ಸಮೀಕ್ಷೆ ಆರಂಭವಾಗಬೇಕಿದೆ. ಆದರೆ, ಪರಿಶಿಷ್ಟ ಜಾತಿಗಳಲ್ಲಿ ಗೊಂದಲಗಳೂ ಹಾಗೆ ಉಳಿದಿವೆ. ದಲಿತರ ನಡುವೆ ಕ್ರೈಸ್ತ ಜಾತಿಗಳನ್ನು ಸೇರಿಸಿಕೊಂಡು ಜಾತಿ ಸಮೀಕ್ಷೆ ಮಾಡುವುದು ಸಂವಿಧಾನ ವಿರೋಧಿಯಾಗಿದೆ. 341ನೇ ವಿಧಿಯ ಅನ್ವಯ ಇಲ್ಲದ ಜಾತಿಪಟ್ಟಿ ಹಿಡಿದು ಸಮೀಕ್ಷೆ ಮಾಡಲು ನಾವು ಬಿಡುವುದಿಲ್ಲ. ಕ್ರಮಬದ್ಧತೆಯೇ ಇಲ್ಲದ ಈ ಜಾತಿ ಸಮೀಕ್ಷೆಯ ಗೊಂದಲದಿಂದ ಕೂಡಿದೆ ಎಂದು ಹೇಳಿದರು.

2 ತಿಂಗಳ ಹಿಂದೆಯಷ್ಟೇ ನ್ಯಾ.ನಾಗಮೋಹನ್ ದಾಸ್ ಆಯೋಗ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಮಾಡಿದೆ. ಅದಕ್ಕೆ ದಲಿತರ ಮೀಸಲು ನಿಧಿಯಿಂದ 150 ಕೋ. ರೂ. ವ್ಯಯಿಸಲಾಗಿದೆ. ಈಗ ಮತ್ತೆ ದಲಿತರ ಸಮೀಕ್ಷೆ ಮಾಡುವ ಅಗತ್ಯ ಏನಿದೆ. ಎರಡು ತಿಂಗಳಲ್ಲಿ ದಲಿತರ ಸಾಮಾಜಿಕ, ಶೈಕ್ಷಣಿಕ ಸ್ಥಿತಿಯಲ್ಲಿ ಯಾವ ಬದಲಾವಣೆ ಆಗಿದೆ ಎಂದು ಪ್ರಶ್ನಿಸಿದ ಅವರು, ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಕ್ರೈಸ್ತರ ಸೇರ್ಪಡೆಯಿಂದ ಸಮೀಕ್ಷೆ ನಗೆಪಾಟಲಿಗೆ ಗುರಿಯಾಗಿದೆ. ಸರ್ಕಾರ ಇಡೀ ಪ್ರಕ್ರಿಯೆಯನ್ನು ಗಂಭೀರವಾಗಿ ಪರಿಗಣಿಸಿಲ್ಲವೆಂದು ಟೀಕಿಸಿದರು.

ಒಳಮೀಸಲಾತಿಯ ವರ್ಗೀಕರಣದ ವಿಷಯ ಇನ್ನೂ ಬಗೆಹರಿದಿಲ್ಲ. ಸರ್ಕಾರ 59 ಅಲೆಮಾರಿ ಜಾತಿಗಳನ್ನು ಬೀದಿ ಪಾಲು

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

# ಹಿರಿಯರಿಗೂ ಇಂದಿನ ಪೀಳಿಗೆಗೂ ಇರುವ ಅಂತರ ದಾಟುವುದು ಹೇಗೆ?

## 'ರಾತ್ರಿ ಎಷ್ಟ್ ಹೊತ್ತಾದ್ರೂ ಮಲಗಲ್ಲ, ಬೆಳಿಗ್ಗೆ ಎಷ್ಟ್ ಹೊತ್ತಾದ್ರೂ ಏಳಲ್ಲ'

ನನ್ನ ಪೀಳಿಗೆಯ ಅಂದರೆ ಈಗ 50–60 ವಯಸ್ಸಾಗಿರುವವರ ಮತ್ತು ಇನ್ನೂ ಹೆಚ್ಚು ವಯಸ್ಸಿನವರೂ ಸಹ ಇಂದಿನ ಯುವಕ ಯುವತಿಯರು ಮತ್ತು ಹದಿಹರೆಯದವರ ಬಗ್ಗೆ ಆಗಾಗ ದೂರುವ ಮಾತಿದು. ತಡರಾತ್ರಿಯವರೆಗೂ ತಮ್ಮ ಚಲನಚಿತ್ರ ನಂತರವೂ, ಗಣಕಯಂತ್ರದಲ್ಲೋ, ಟ್ಯಾಬ್ ಮುಂತಾದ ನೂತನ ಸಂಪರ್ಕಗಳಲ್ಲೋ ಅಥವಾ ತಡರಾತ್ರಿಯ ತನಕದ ಸಮಕಾಲೀನ ಮನರಂಜನೆ-ಓಡಾಟಗಳಲ್ಲೋ ತಮ್ಮನ್ನು ತಾವು ಹುದುಗಿಸಿಕೊಂಡಿರುವ ಯುವಪೀಳಿಗೆಯವರಲ್ಲಿ ಬಹುಪಾಲು ಮಂದಿ ಮಲಗುವುದು ಮಧ್ಯರಾತ್ರಿಯ ನಂತರವೇ. ಹೀಗಾಗಿ ಬೆಳಗ್ಗೆ ಬೇಗ ಏಳುವುದು ಸಹ ಅವರಿಗೆ ತುಂಬ ಕಷ್ಟಕರವಾದ ಸಂಗತಿಯಾಗುತ್ತದೆ. ಅದರಲ್ಲೂ ವಾರಾಂತ್ಯವಾದ ಶನಿವಾರ-ಭಾನುವಾರಗಳ ಈ ಮಾತು ಹೆಚ್ಚು ಅನ್ವಯಿಸುತ್ತದೆ.

ಈ ಮೇಲ್ಕಂಡದ ವಿಷಯವನ್ನು ನಾವು ತುಸು ಹೆರೆದು, ಹಿಷ್ಟ್ ತೆಗೆದು ಇದರ ತಿರುಳೇನೆಂದು ಹೇಳಿದರೆ ಇದು ಕೇವಲ ನಿದ್ರಿಸುವ ಮತ್ತು ನಿದ್ರೆಯಿಂದ ಎಚ್ಚೆತ್ತುಕೊಳ್ಳುವ ಸಮಯದ ವಿಷಯ ಅಲ್ಲ, ಬದಲಾದ ಜೀವನಶೈಲಿಯನ್ನು ಕುರಿತಾದ ತುಂಬ ಆಳವಾದ ಸಂಗತಿ ಎಂದು ನಮಗೆ ಅರ್ಥವಾಗುತ್ತದೆ.

ಯುವ ಪೀಳಿಗೆಯ ಕಣ್ಣುಗಳಿಂದ ಬದುಕನ್ನು ನೋಡುವ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡಿದರೆ ನಮಗೆ ಕಳೆದ ಸುಮಾರು 30–35 ವರ್ಷಗಳಲ್ಲಿ ಅಂದರೆ ಜಾಗತೀಕರಣದ ಅನಂತರ ಭಾರತ ಹಾಗೂ ಇಡೀ ಜಗತ್ತು ದೊಡ್ಡ ಪ್ರಮಾಣದಲ್ಲಿ ಬದಲಾದ ಬಗೆಯು ನಮ್ಮ ಮನಸ್ಸಿಗೆ ಬರುತ್ತದೆ. ಮನುಕುಲದ ನಾಗರಿಕತೆಯ ಹಂತಗಳನ್ನು ಯುಗಗಳಲ್ಲಿ ಗುರುತಿಸುವುದಾದರೆ ಗುಹಾವಾಸಯುಗ, ಕೃಷಿಯುಗ, ಕೈಗಾರಿಕಾಯುಗಗಳ ನಂತರ ಇದು ಮಾಹಿತಿ ತಂತ್ರಜ್ಞಾನದ ಯುಗ. ಮಹಾ ಬದಲಾವಣೆಯೊಂದು ಇವತ್ತು ಮಧ್ಯವಯಸ್ಸು ಮೀರಿದ ಪೀಳಿಗೆಯ ಕಣ್ಣೆದುರಿಗೇ ಸಂಭವಿಸಿದೆ! ಮನುಕುಲದ ಮುಂದಿನ ಯುಗವಾದ ಮಾಹಿತಿ ತಂತ್ರಜ್ಞಾನಯುಗಕ್ಕೆ ಬಂದಾಗ ಈ ಸನ್ನಿವೇಶವು ಬದಲಾಯಿತು. ಒಂದು ದೇಶದವರು ಇನ್ನೊಂದು ದೇಶದವರ ಸಮಯದ ವಲಯಕ್ಕೆ ತಕ್ಕಂತೆ ಕೆಲಸ ಮಾಡಲಾರಂಭಿಸಿದಾಗ ಜೀವನಶೈಲಿಗಳಲ್ಲಿ ಮತ್ತಷ್ಟು ಬದಲಾವಣೆಗಳಾದವು.

**ಬಿಪಿಓ ಕೆಲಸಗಳ ಯುಗ**

ಬಿಸಿನೆಸ್ ಪ್ರೊಸೆಸ್ ಔಟ್‌ಸೋರ್ಸಿಂಗ್ ಅಂದರೆ ವ್ಯವಹಾರದ ಪ್ರಕ್ರಿಯೆಗಳ ಹೊರಗುತ್ತಿಗೆ ಇದು ಜಾಗತೀಕರಣದ ಸಮಯದಲ್ಲಿ ಅಂದರೆ 1990–91ರಲ್ಲಿ ಬಹುವಾಗಿ ಕಂಡುಬಂದಿತು. ಇದು ನಮ್ಮಂತಹ ಅಗಣಿತ ಮೂರನೇ ಜಗತ್ತಿನ ದೇಶಗಳ ಉದ್ಯೋಗ ವಲಯದಲ್ಲಿ ಆದ ಬಹು ದೊಡ್ಡ ಬದಲಾವಣೆ ಎನ್ನಬಹುದು. ರಾತ್ರಿಯ ಮಾನವ ಸಂಪನ್ಮೂಲ ಎಂದು ನಾವು ಕರೆಯುವ ನಮ್ಮ ಯುವಕ ಯುವತಿಯರು ಅಮೆರಿಕಾ, ಆಸ್ಟ್ರೇಲಿಯಾ ಮುಂತಾದ ಬೇರೆ ದೇಶಗಳ ಸಮಯವಲಯದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ್ದು ಆಗಲೇ. ಎಲ್ಲರೂ ಮಲಗಿರುವ ಹೊತ್ತಿನಲ್ಲಿ ಎದ್ದು ಕಛೇರಿಗೆ ಹೋಗುವುದು ಮಾತ್ರ ಅಲ್ಲ, ತಮ್ಮ ಭಾಷಾ ಉಚ್ಚಾರ (ಆಕ್ಸೆಂಟ್) ಅಷ್ಟೇ ಏಕೆ ತಮ್ಮ ಹೆಸರನ್ನು ಸಹ ಈ ಯುವಕ ಯುವತಿಯರು ಬದಲಾಯಿಸಿಕೊಂಡರು! ಹರೀಶ್ ಹ್ಯಾರಿಯಾದ, ಜಾಹ್ನವಿ ಜೆನ್ನಿಯಾದಳು. ತಮ್ಮೊಂದಿಗೆ ವ್ಯವಹರಿಸುವ ವಿದೇಶಿ ಗ್ರಾಹಕರ ಜೊತೆ ವ್ಯವಹರಿಸುವಾಗ ಅವರಿಗೆ ತಾವು ಭಾರತದವರೊಂದಿಗೆ ಮಾತಾಡುತ್ತಿದ್ದೇವೆಂಬುದು ಗೊತ್ತಾಗಬಾರದು. ತಮ್ಮದೇ ದೇಶದವರೊಂದಿಗೆ ಮಾತಾಡುತ್ತಿದ್ದೇವೆ ಎಂಬ ಭಾವನೆ ಬರಬೇಕು ಎಂಬುದಕ್ಕಾಗಿ ಇಷ್ಟು ಸಾಹಸ! ಗೊಲ್ಲಹಳ್ಳಿ ಶಿವ ಪ್ರಸಾದ್‌ರು ಬರೆದ ಝುಣಝುಣ ಕಾಂಚಣದಲ್ಲಿ ಅಮೇರಿಕಾದ ಲಾಂಛನದಲ್ಲಿ ಎಲ್ಲ ಮಾಯ ನಾಳೆ ನಾವು ಮಾಯ ಕವಿತೆ ನೆನಪಾಗುತ್ತದೆ.

**ಬದಲಾಯಿತು ಯುವಪೀಳಿಗೆಯ ಜೀವನ ಶೈಲಿ**

ಎಷ್ಟೆಷ್ಟು ಹೊತ್ತಿಗೋ ಮನೆಯಿಂದ ಹೊರಡುವುದು, ಎಷ್ಟೆಷ್ಟು ಹೊತ್ತಿಗೋ ಬರುವುದು, ಎಲ್ಲರೂ ಎದ್ದಿದ್ದಾಗ ತಾವು ಮಲಗಿರುವುದು, ಎಲ್ಲರೂ ಮಲಗಿದ್ದಾಗ ತಾವು ಎದ್ದಿರುವುದು, ಇದರಿಂದಾಗಿ ಮನೆಯಲ್ಲಿನ ಊಟ-ತಿಂಡಿಗಳನ್ನು ತಿನ್ನುವ ಪ್ರಮೇಯವಿಲ್ಲದೆ ಕಛೇರಿಯ ಉಪಹಾರ ಗೃಹದಲ್ಲೋ ಅಥವಾ ಅಣಬೆಗಳಂತೆ ಎಲ್ಲೆಲ್ಲೂ ಹುಟ್ಟಿಕೊಳ್ಳುತ್ತಿದ್ದ ಮ್ಯಾಕ್ ಡೊನಾಲ್ಡ್‌ಗಳಲ್ಲೋ, ಪಿಜ್ಜಾ ಹಟ್‌ಗಳಲ್ಲೋ ತಿನ್ನುವುದು. ನಮ್ಮ ಯುವಕ-ಯುವತಿಯರ ಹೆಸರು ಮಾತ್ರ ಬದಲಾದದ್ದಲ್ಲ, ಅವರ ಊಟ-ಉಡುಪು-ಮನರಂಜನೆಗಳ ಅಭಿರುಚಿ ಸಹ ಬದಲಾಯಿತು. ಹಬ್ಬ-ಹರಿದಿನಗಳಿಗೂ ರಜೆ ಸಿಗದಂತಹ ಪರಿಸ್ಥಿತಿ ಇದ್ದದ್ದರಿಂದ ಮನೆಯ ಆಚರಣೆ, ರೀತಿ-ರಿವಾಜುಗಳ ಪರಿಚಯವು ಸಹ ತಪ್ಪಲಾರಂಭಿಸಿತು. 1990ರ ಮುಂಚೆ ಅಂದರೆ ಜಾಗತೀಕರಣದ ಮುಂಚೆ ಪ್ರತಿಭಾ ಪಲಾಯನ ಅನ್ನುವುದು ಭೌತಿಕವಾಗಿ ಆಗುತ್ತಿದ್ದರೆ 1990ರ ನಂತರ ಪ್ರತಿಭಾ ಪಲಾಯನ ಅನ್ನುವುದು ಇಲ್ಲಿದ್ದೇ ಆಗಲು ಅಂದರೆ ಮಾನಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಶುರುವಾಯಿತು! (ಅಮ್ಮಾ ನಾ ಸೇಲಾದೆ, ಅಮೆರಿಕಾ ಪಾಲಾದೆ ಎಂಬ ಕಾಶಿನಾಥ್‌ರ ಹಾಡು ನೆನಪಾಗುತ್ತದಲ್ಲವೆ?)

ಈಗ ಸುಮಾರು ಮೂವತ್ತು-ಮೂವತ್ತೈದು ವರ್ಷಗಳ ನಂತರ ಏನಾಗುತ್ತಿದೆ ನಮ್ಮ ಯುವಪೀಳಿಗೆಗೆ ಎಂಬುದನ್ನು ಗಮನಿಸೋಣ. ಹಿಂದೆ ಇದ್ದಂತಹ ಕೂಡುಕುಟುಂಬಗಳು ಈಗ ಇಲ್ಲದಿರುವುದು, ಬೀಜಕೇಂದ್ರ ಕುಟುಂಬಗಳಲ್ಲಿ ಗಂಡ ಮತ್ತು ಹೆಂಡತಿ ಇಬ್ಬರೂ ದೀರ್ಘಕಾಲ ಮನೆಯಿಂದ ಹೊರಗೆ ಇರಬೇಕಾದ ಸುದೀರ್ಘ ಕೆಲಸದ ಅವಧಿ, ನಗರಗಳಲ್ಲಿ ಇರುವ ಅಗಣಿತ ಹೋಟಲ್‌ಗಳು ಆಹಾರ ಸರಬರಾಜು ವ್ಯವಸ್ಥೆ ತಂತ್ರಾಂಶ ಆಧಾರಿತ ಸರಬರಾಜುಗಳು (ಸ್ವಿಗ್ಗಿ,ಝೊಮ್ಯಾಟೊ ಇತ್ಯಾದಿ). ಮನೆಯಲ್ಲಿ ಬಿಸಿ ಮಾಡಿದರೆ ಸಾಕು ಕ್ಷಣಾರ್ಧದಲ್ಲಿ ತಿನ್ನಲು ತಯಾರಾಗಿರುವ ಆಹಾರ ಪದಾರ್ಥಗಳು (ಉಪ್ಪಿಟ್ಟು, ಅವಲಕ್ಕಿ, ಮಲಬಾರ್ ಪರೋಟ ಇಂಥವು), ಗಂಡ ಮತ್ತು ಹೆಂಡತಿ ಇಬ್ಬರೂ ದೀರ್ಘಕಾಲ ಗಣಕಯಂತ್ರದ ಮುಂದೆ ಕುಳಿತು ಕೆಲಸ ಮಾಡಿ, ವಾಹನ ದಟ್ಟಣೆಯಲ್ಲಿ ಗಂಟೆಗಟ್ಟಲೆ ಕಳೆದು ಇಳಿಸಂಜೆ ಅಥವಾ ರಾತ್ರಿ ಮನೆ ತಲುಪುವ ಸಂದರ್ಭದಲ್ಲಿ ಆಗ ಹೊಸದಾಗಿ ಅಡಿಗೆ ಪ್ರಾರಂಭಿಸಲು ಅದು ಆಗುವವರೆಗೆ ಕಾಯಲು ಯಾರಿಗೆ ತಾನೆ ತಾಳ್ಮೆ ಇರಬಹುದು!? ಹೀಗಾಗಿ ನಮ್ಮ ಅಡಿಗೆ ಮನೆಗಳು ತಮ್ಮ ಪ್ರಾಮುಖ್ಯ, ಅಸ್ತಿತ್ವ ಕಳೆದುಕೊಳ್ಳುತ್ತಿವೆ.

**ಪರಿಹಾರ ಏನು:** ಇಂದಿನ ಮಾಹಿತಿ ತಂತ್ರಜ್ಞಾನದ ಯುಗದಿಂದ ನಾವು ಕೃಷಿಯುಗಕ್ಕೆ ಮರಳಿ ಹೋಗಲು ಸಾಧ್ಯ ಇಲ್ಲ, ಸರಳ ಕೈಗಾರಿಕೆಗಳ ಯುಗಕ್ಕೂ ಮರಳಲು ಸಾಧ್ಯ ಇಲ್ಲ. ಜೀವನದ ನದಿ ಹಿಮ್ಮುಖವಾಗಿ ಹರಿ ಯುವುದಿಲ್ಲ. ಅಯ್ಯೋ, ಹಳೆಯ ಕಾಲ ಹೀಗಿತ್ತು, ಹಾಗಿತ್ತು, ಈಗ ಹಾಗಿಲ್ಲ ಎಂದು ಹಳಹಳಿಸಿ ಪ್ರಯೋಜನ ಇಲ್ಲ. ಹಿರಿಯರು ರಾತ್ರಿ ಎಷ್ಟು ಹೊತ್ತಾದರೂ ಮಲಗದ, ಬೆಳಿಗ್ಗೆ ಎಷ್ಟು ಹೊತ್ತಾದರೂ ಏಳದ ತಮ್ಮ ಸಂತಾನಗಳ ಮನಸ್ಸಿನ ಹಾಗೂ ಬದುಕಿನ ಮರ್ಮವೇನು ಎಂಬುದನ್ನು ಅರಿ ಯಲು ಮೊದಲು ತಾವೇ ಒಂದು ಹೆಜ್ಜೆ ಮುಂದೆ ಇಡಬೇಕಿದೆ. ಜಗತ್ತೇ ಒಂದು ಹಳ್ಳಿಯಾದ ಅಂತರ್ಜಾಲದ ಯುಗದಲ್ಲಿ, ಹಳ್ಳಿಯೇ ತಮ್ಮ ಜಗತ್ತಾಗಿದ್ದ ಪೀಳಿಗೆಗೆ ಮತ್ತು ಅವರ ಮಕ್ಕಳಿಗೆ (ಅಂದರೆ ಅಂತರ್ಜಾಲವು ನಮ್ಮನ್ನು ಆವರಿಸುವ ಮುಂಚಿನ ಪೀಳಿಗೆಗೆ) ಈ ಹೆಜ್ಜೆಯು ಒಂದು ಸವಾಲು. ಆದರೆ, ವಿಧಿ ಇಲ್ಲ. ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು ತಮ್ಮಿಂದ ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ದೂರ ಆಗಬಾರದು ಎಂದರೆ ಅವರ ಬದುಕಿನ ಲಯಗಳನ್ನು ಅರಿಯಲು ಹಿರಿಯ ಪೀಳಿಗೆಯವರು ಪ್ರಯತ್ನ ಮಾಡಲೇ ಬೇಕು. ಹಾಗಾದರೆ ಏನು ಮಾಡಬಹುದು ಹಿರಿಯರು? ಈ ಕೆಳಗಿನ ಹೆಜ್ಜೆಗಳು ಬಹುಶಃ ನಾವು ಚರ್ಚಿಸಿದ ಪೀಳಿಗೆಯ ಅಂತರವನ್ನು ಕಡಿಮೆ ಮಾಡಬಹುದು ಅನ್ನಿಸುತ್ತದೆ.

1.ಕಿರಿಯರ ಪ್ರತಿ ಹೆಜ್ಜೆಯನ್ನೂ ನೈತಿಕತೆಯ ಕಣ್ಣುಗಳಿಂದ ಅಳೆದು ಅವರ ಬಗ್ಗೆ ತೀರ್ಮಾನ ಮಾಡುವುದನ್ನು ದೂರ ಇಡಬೇಕು. ಬೆಳಿಗ್ಗೆ ಬೇಗ ಏಳಲ್ಲ, ಹಿರಿಯರ ಮಾತಿನ ಬಗ್ಗೆ ಗೌರವ ಇಲ್ಲ, ಮನೆಯಲ್ಲಿ ಮಾಡಿದ್ದು ತಿನ್ನಲ್ಲ, ನಾನು ಮಾಡಿದ ಅಡಿಗೆಯ ಬಗ್ಗೆ ಅಕ್ಕರೆ ಇಲ್ಲ, ಮದುವೆ ಮಾಡಿಕೊಳ್ಳಕ್ಕೆ ಒಪ್ಪಲ್ಲ, ಬದುಕಿನ ಬಗ್ಗೆ ಗಾಂಭೀರ್ಯವೇ ಇಲ್ಲ, ಮೈ ಕಾಣುವ ಬಟ್ಟೆ ಹಾಕ್ತಾಳೆ ಸಂಪ್ರದಾಯದ ಬಗ್ಗೆ ಸ್ವಲ್ಪವೂ ಆದರ ಇಲ್ಲ. ಹೀಗೆ ಯೋಚಿಸುತ್ತಾ ನಾವು ಸರಿ ಅವರು ತಪ್ಪು ಎಂಬ ನಿಲುವಿನಿಂದಲೇ ಕಿರಿಯರನ್ನು ನೋಡುತ್ತಿದ್ದರೆ ಪೀಳಿಗೆಗಳ ಈ ಮಹಾ ಅಂತರ ಹೆಚ್ಚುತ್ತದೆಯೇ ಹೊರತು ಕಡಿಮೆ ಆಗುವುದಿಲ್ಲ. ಕೈಗಾರಿಕೆಯ ಯುಗದಲ್ಲಿ ಹುಟ್ಟಿದವರು ಕೃಷಿಯುಗದಲ್ಲಿ ಹುಟ್ಟಿದ ತಮ್ಮ ಹಿರಿಯರಿಗೆ ಅಯ್ಯೋ, ಈ ಹಿರಿಯರಿಗೆ ನಮ್ಮ ಪೀಳಿಗೆಯ ಲಯಗಳು ಅರ್ಥವೇ ಆಗುವುದಿಲ್ಲ ಎಂದು ಪೇಚಾಡುತ್ತಿರಲಿಲ್ಲವೆ, ಇದೂ ಹಾಗೆಯೇ.

2.ಕಿರಿಯರ ಕಣ್ಣುಗಳಿಂದ ಪ್ರಪಂಚವನ್ನು ನೋಡಲು ನಾವು ಹಿರಿಯರು ಪ್ರಯತ್ನ ಮಾಡಬೇಕಿದೆ. ಅವರ ಭಾಷೆ, ತಂತ್ರಜ್ಞಾನದ ಯಜಮಾನ್ಯವುಳ್ಳ ಅವರ ಸಂವಹನ ಕ್ರಮ, ಅವರ ಮನರಂಜನೆಯ ರೀತಿಗಳು, ಅಂದರೆ ಅವರು ಕೇಳುವ ಹಾಡುಗಳು, ನೋಡುವ ಸಿನಿಮಾಗಳು, ಅವರ ಚಾರಣದ ಆಸಕ್ತಿ, ಗಿಡ ಮತ್ತು ಪ್ರಾಣಿಗಳನ್ನು ಮಕ್ಕಳಂತೆ ಸಾಕುವ ಅವರ ದೃಷ್ಟಿಕೋನ (ಪ್ಲ್ಯಾಂಟ್ ಪೇರೆಂಟಿಂಗ್, ಪೆಟ್ ಪೇರೆಂಟಿಂಗ್), ಅವರ ವಿಭಿನ್ನ ಪ್ರವಾಸಗಳು, ನಮ್ಮ ಭೂಗೋಳಕ್ಕೆ ಆಗಿರುವಂತಹ ಮಾಲಿನ್ಯವನ್ನು ಕಡಿಮೆ ಮಾಡುವಲ್ಲಿ ಅವರು ತೋರುವ ಕಾಳಜಿ, ಅದಕ್ಕಾಗಿ ಹೊಸ ಹೊಸ ಹೊಸ ಯೋಜನೆಗಳನ್ನು ಮಾಡಿ ಅವುಗಳಲ್ಲಿ ಪಡೆಯುತ್ತಿರುವ ಕಾರ್ಯಸಿದ್ಧಿ, ಕ್ರೀಡೆ ಗಳು, ವ್ಯಾಯಾಮ, ಮತ್ತು ದೇಹದ ತಕ್ಕುಮೆ (ಫಿಟ್ನೆಸ್)ಗಾಗಿ ಅವರು ವಹಿಸುವ ಶ್ರಮ, ಇವನ್ನೆಲ್ಲ ನಾವು ಹಿರಿಯರು ಮೆಚ್ಚಬೇಕಲ್ಲವೆ? ಮೆಚ್ಚುವುದು ಮಾತ್ರವಲ್ಲ, ಅವರಿಂದ ನಾವು ಕಲಿಯುವುದು ಸಹ ತುಂಬ ಇದೆ.

3. ಕಿರಿಯರನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಅವರ ತಂತ್ರಜ್ಞಾನಭರಿತ ಪ್ರಪಂಚದಲ್ಲಿ ನಾವು ಸಹ ಓಡಾಡಲು, ಅಡ್ಡಾಡಲು ಕಲಿಯಬೇಕು. ಇತ್ತೀಚೆಗೆ ಕನ್ನಡ ಬರದ ಯುವಕನೊಬ್ಬ ಚ್ಯಾಟ್ ಜಿಪಿಟಿಯನ್ನು ಬಳಸಿ ಆಟೊ ಚಾಲಕನೊಂದಿಗೆ ಚೌಕಾಸಿ ಮಾಡಿ ಅವನ ಮನವೊಲಿಸಿ ಪ್ರಯಾಣದರ ಕಡಿಮೆ ಮಾಡಿಸಿಕೊಂಡಿದ್ದನ್ನು(!) ನಮ್ಮಲ್ಲಿ ಕೆಲವರು ಓದಿರಬಹುದು. ಜಾಣದೂರವಾಣಿಗಳು(ಸ್ಮಾರ್ಟ್ ಫೋನ್ಸ್), ಗೂಗಲ್ ಕೊಡುವ ಸ್ಥಳಗುರುತು (ಲೊಕೇಷನ್)ಗಳ ಮೂಲಕ ಜಾಗಗಳನ್ನು ಹುಡುಕುವುದು, ಝೆಪ್ಟೋ, ಡಂಝೋ, ಬ್ಲಿಂಕಿಟ್ ಮುಂತಾದ ಅನ್ವಯ(ಯಾಪ್)ಗಳ ಮೂಲಕ ಅವರು ಝಟ್‌ಪಟ್ ಎಂದು ಮನೆಗೆ ಸಮಾನು ತರಿಸುವ ಜಾಣರೀತಿ ಇವುಗಳನ್ನು ನಾವೂ ಕಲಿತರೆ ನಮ್ಮ ಬದುಕು ಸಹ ತುಸು ಸುಲಭವಾಗುವುದರಲ್ಲಿ ಸಂಶಯ ಇಲ್ಲ.

4.ಹಿರಿಯರಿಗೆ ಗೊತ್ತಿರದ ಎಷ್ಟೋ ರುಚಿ-ಅಭಿರುಚಿಗಳು ಇಂದಿನ ಕಿರಿಯರಲ್ಲಿವೆ. ಚೀಸ್ ತಿನ್ನುವುದರಿಂದ ಹಿಡಿದು, ಪುಸ್ತಕಗಳು, ಶಾಂತವಾದ ಸ್ವಚ್ಛ ವಾತಾವರಣ ಮತ್ತು ಕಾಫಿ ಒಟ್ಟಿಗೆ ಸಿಗುವ ಕೆಫೆಗಳು, ಹೆಂಗಸರು ಪಾವತಿ ಮಾಡಿ ಯಾರ ಹಂಗೂ ಇಲ್ಲದೆ ತಮ್ಮಷ್ಟಕ್ಕೆ ತಾವು ಆರಾಮವಾಗಿ ವಿಶ್ರಾಂತಿ ಪಡೆಯಲಿಕ್ಕಾಗಿ ಮಾಡಿಕೊಂಡಿರುವ ನಗರ ಮಧ್ಯದ ಆರಾಮತಾಣಗಳು, ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಆಪ್ತ ಸಲಹೆ, ಸಮಾಲೋಚನೆಗಾಗಿ ಅವರು ತಮ್ಮ ಬದುಕಿನಲ್ಲಿ ನಿರ್ಮಿಸಿಕೊಂಡಿರುವ ಮಾನಸಿಕ ಹಾಗೂ ಭೌತಿಕ ಸ್ಥಳಾವಕಾಶ, ತಾವೇ ತಯಾರು ಮಾಡುವ ಪುಟ್ಟ ಪುಟ್ಟ ಸಿನಿಮಾಗಳು (ಶಾರ್ಟ್ ಮೂವೀಸ್), ಮತ್ತು ಇತ್ತೀಚೆಗೆ (ಅಂದರೆ 2011ರಿಂದ ಈಚೆಗೆ) ಬಹು ಜನಪ್ರಿಯತೆ ಪಡೆದಿರುವ ಏಕವ್ಯಕ್ತಿ ಹಾಸ್ಯ ಪ್ರದರ್ಶನ(ಸ್ಟ್ಯಾಂಡ್ ಅಪ್ ಕಾಮಿಡಿ)ದಲ್ಲಿ ಅವರು ತೋರುವ ಗಾಢ ಆಸಕ್ತಿ ಇವೆಲ್ಲವೂ ನೂತನವಾಗಿವೆ ಮತ್ತು ಚೇತೋಹಾರಿಯಾಗಿವೆ ಅಲ್ಲವೆ? ನಾವು ಹಳೆಯ ರೀತಿಗಳೇ ಸರಿ ಎಂಬ ನಮ್ಮ ಜಿಗುಟು ಮನೋಧರ್ಮವನ್ನು ಬದಿಗಿಟ್ಟು ಹೊಸ ಕಣ್ಣುಗಳಿಂದ ಅವುಗಳನ್ನು ನೋಡಬೇಕು ಅಷ್ಟೆ.

ಗಣಕ ವಿಜ್ಞಾನದಲ್ಲಿ ಬಿಇ ಓದಿದ ನಮ್ಮ ಮಗ ಅಪ್ಪ, ನಾನು ಸಾಫ್ಟ್‌ವೇರ್ ಕೆಲಸಕ್ಕೆ ಹೋಗಲ್ಲ, ಶೆಫ್ ಆಗಿ ಕೆಫೆ ತೆರೀತೀನಿ ಅಂದಾಗ, ಅಥವಾ ಬಿ ಟೆಕ್ ಓದಿದ ಮಗಳು ಅಮ್ಮ, ನಾನು ಮೇಕ್‌ಅಪ್ ಆರ್ಟಿಸ್ಟ್ ಆಗ್ತೀನಿ ಎಂದರೆ ಒಂದೇ ಸಲಕ್ಕೆ ಗಾಬರಿ ಬಿದ್ದು ಬುದ್ಧಿ ಇದೆಯಾ ನಿಂಗೆ? ಎಂದು ಕಿರಿಚಾಡುವ ಬದಲು ಅವರ ಜೊತೆ ಕುಳಿತು, ಮಾತಾಡಿ ಹಾಗೆ ಅವರು ಹೇಳಿದ್ದರ ಹಿಂದಿನ ಯಾಕೆ, ಏನು, ಹೇಗೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನು ಹಿರಿಯರು ಮಾಡಿದರೆ ಬಹುಶಃ ಎರಡೂ ಪೀಳಿಗೆಗಳ ಜೀವನ ಪ್ರಯಾಣವೂ ಸುಗಮ ಆಗುತ್ತದೆ ಮತ್ತು ಈ ಎರಡು ಪೀಳಿಗೆಗಳ ನಡುವಿನ ಮಹಾ ಅಂತರವನ್ನು ದಾಟಲು ಸಾಧ್ಯವಾಗುತ್ತದೆ ಅನ್ನಿಸುತ್ತದೆ.

-ಎಲ್.ಜಿ.ಮೀರಾ

# ಮಳೆಯ ರಜೆಗಳು



ಮಳೆ ಎನ್ನುವಂತದ್ದು ಸಕಲ ಜೀವರಾಶಿಗಳಿಗೆ ಪ್ರಕೃತಿಯು ನೀಡಿದ ಒಂದು ವರವಾಗಿದೆ. ಮಳೆಯು ವಾತಾವರಣವನ್ನು ತಂಪಾಗಿಸುತ್ತದೆ ಮತ್ತು ದೂಳು ಮಾಲಿನ್ಯವನ್ನು ತೊಳೆದು ಹಾಕುತ್ತದೆ. ಮಳೆ ನೀರಿನಿಂದ ನದಿಗಳು, ಕೆರೆಗಳು ಹಾಗೂ ಭೂಮಿಯಲ್ಲಿರುವ ಜಲಮೂಲಗಳು ತುಂಬಿ ಹರಿಯುತ್ತದೆ. ಮಳೆಯು ಎಷ್ಟು ಉಪಯುಕ್ತವೋ ಹೆಚ್ಚು ಮಳೆ ಆದರೆ ವಿಕೋಪಗಳು ಮತ್ತು ಹಾನಿಗಳೂ ಸಂಭವಿಸಬಹುದು. ಶಾಲೆಯ ಶೈಕ್ಷಣಿಕ ವರ್ಷವು ಮಳೆಯ ಪ್ರಾರಂಭ ದೊಂದಿಗೆ ಶುರುವಾಗುತ್ತದೆ. ಮಕ್ಕಳು ಹೊಸ ಸಮವಸ್ತ್ರ, ಹೊಸ ಬಾಗ್, ಹೊಸ ಚಪ್ಪಲಿ, ಹೊಸ ಛತ್ರಿ ಎಲ್ಲವೂ ಹೊಸತು. ಅದರ ಜೊತೆಗೆ ಮಳೆಯು ಮಕ್ಕಳನ್ನು ಬಹಳ ಪ್ರೀತಿಯಿಂದಲೇ ಸ್ವಾಗತಿಸುತ್ತದೆ.

ನಾನು ಸಣ್ಣದಿರುವಾಗ ಶಾಲೆಗೆ ಹೊರಡುವ ಮುನ್ನ ಅಪ್ಪ ಹೇಳುವಂತಹ ಮಾತು ಇಂದಿಗೂ ನೆನಪಿದೆ, ಮಗಳೇ ಅಣ್ಣನ ಕೈ ಹಿಡಿದು ತೊರೆಯನ್ನು ದಾಟು ಕೆಳಗೆ ನೋಡಬೇಡ ರಭಸವಾಗಿ ಹರಿಯುತ್ತಿರುವ ನೀರು ತಲೆಸುತ್ತುವಂತೆ ಮಾಡುತ್ತದೆ. ತಂಗಿಯರನ್ನು ತೊರೆದಾಟಿಸುವ ಜವಾಬ್ದಾರಿ ಅಣ್ಣನದ್ದಾಗಿತ್ತು. ಒಂದೊಂದು ದಿನ ತೊರೆಯನ್ನು ದಾಟಿಸಲು ತೊರೆಯ ದಂಡೆಯ ಈ ತುದಿಗೆ ಒಬ್ಬರು ನಿಂತರೆ ಇನ್ನೊಂದು ತುದಿಗೆ ಮತ್ತೊಬ್ಬರು, ಮಧ್ಯದಲ್ಲಿ ಒಬ್ಬರು ಹೀಗೆ ತೊರೆದಾಟುವ ಸಂತೋಷ ಇಂದಿಗೂ ಮರೆಯಲಾರದಂತಹ ಒಂದು ಸುಂದರ ನೆನಪು. ಎತ್ತುಗಳ ಮೂಲಕ ಉಳುಮೆ ಮಾಡಿ ಬಿತ್ತನೆ ಮಾಡಿದ ಹಸಿರಿನ ಮಧ್ಯದ ಬದುವನ್ನು ದಾಟಿ, ಕಂಗು, ತೆಂಗುಗಳ ಸಿರಿ ಸಂಪತ್ತಿನ ನಡುವೆ ಸಾಲಿನುದ್ದಕ್ಕೂ ನಡೆದು ತೊರೆಯನ್ನು ದಾಟಿ ಗುಡ್ಡವನ್ನು ಏರಿಳಿದು ಶಾಲೆಯತ್ತ ಸಾಗುವ ನಮ್ಮ ಪ್ರಯಾಣ ಬಾಲ್ಯದ ಸುಂದರ ಅನುಭವವಾಗಿತ್ತು.

ಅಂದು ಎಷ್ಟೇ ಬಿರುಸಾದ ಗಾಳಿ ರಭಸವಾದ ಮಳೆ ಸುರಿದರು ನಾವು ಶಾಲೆಗೆ ಹೋಗಲೇ ಬೇಕಿತ್ತು. ಯಾರೂ ಶಾಲೆಗೆ ರಜೆಯನ್ನು ನೀಡುತ್ತಿರಲಿಲ್ಲ. ''ಮಳೆಯ ರಜೆ'' ಎನ್ನುವುದು ಅರಿವಿಗೆ ಬಾರದ ವಿಷಯವಾಗಿತ್ತು. ಜೋರಾದ ಮಳೆಗೆ ಹೋದ ಮಕ್ಕಳು ಹಿಂತಿರುಗಿ ಬರು ವವರೆಗೆ ಬಾಗಿಲ ಮುಂದೆ ಕಾಯುತ್ತಿರುವ ಪೋಷಕರು. ಅಂದಿನ ಕಾಲಕ್ಕೆ ಕೂಡು ಕುಟುಂಬಗಳೇ ಹೆಚ್ಚು. ಎಲ್ಲರೂ ಒಂದೇ ಮನೆಯಲ್ಲಿ. ನನ್ನ ಮಗ, ನಿನ್ನ ಮಗಳು, ಅನ್ನುವ ತಾರತಮ್ಯ ವಿಲ್ಲ. ಎಲ್ಲಾ ಮಕ್ಕಳು ನಮ್ಮ ಮನೆಯ ಮುತ್ತುಗಳು ಎನ್ನುವ ಭಾವನೆ. ಮಕ್ಕಳ ಜವಾಬ್ದಾರಿಯು ಎಲ್ಲಾ ಮನೆಯ ಸದಸ್ಯರದ್ದಾಗಿತ್ತು. ಮಕ್ಕಳು ಶಾಲೆಗೆ ತಲುಪಿ ಹಿಂದಿರುಗುವವರೆಗೂ ಎಲ್ಲರಿಗೂ ಮಕ್ಕಳ ಬಗ್ಗೆ ಕಾಳಜಿಯಿರುತ್ತಿತ್ತು. ಮಳೆಗಾಲದಲ್ಲಿ ಶಾಲೆಯಿಂದ ಹಿಂದಿರುಗಿ ಸಂಜೆಯ ಹೊತ್ತಿಗೆ ಮನೆಗೆ ಬಂದಾಗ ಘಮಘಮ ಪರಿಮಳ ಮೂಗಿಗೆ ಹೊಡೆಯುತ್ತಿತ್ತು. ಎಣ್ಣೆಯಲ್ಲಿ ಕರಿದ ಹಲಸಿನ ಹಪ್ಪಳ. ಅದನ್ನು ಸವಿಯುವ ಆ ಘಳಿಗೆ ಸುಂದರವಾಗಿತ್ತು. ಯಾವ ಕರಿದ ತಿಂಡಿಗೂ ಸರಿಸಾಟಿ ಇಲ್ಲದ ರುಚಿ. ಇದು ನಮ್ಮ ಕಾಲದ ಮಳೆಯ ಜೀವನ.

ಇಂದು ಬೆಳ್ಳಂಬೆಳಗ್ಗೆ ಮನೆಯ ಮುಂಭಾಗದಲ್ಲಿ ಬಂದು ಹಾರ್ನ್ ಹೊಡೆಯುವ ಶಾಲಾ ವಾಹನಗಳು. ಅದನ್ನು ಹತ್ತಿ ಶಾಲೆಯಂಗಳದಲ್ಲಿ ಇಳಿಯುವ ಇಂದಿನ ಮಕ್ಕಳು. ಒಂದೇ ಒಂದು ಮಳೆ ಹನಿ ಮಗುವಿನ ತಲೆಗೆ ತಾಗದಂತೆ ಮುಂಜಾಗ್ರತೆ. ಮಕ್ಕಳಿಗೆ ಜ್ವರ, ಶೀತ, ಕೆಮ್ಮು ಬರಬಹುದು ಹಾಗಾಗಿ ಬಿಸಿ ಬಿಸಿ ಆಹಾರ ಮತ್ತು ನೀರನ್ನು ಸೇವಿಸು ಎಂದೆನುತ ಕೈಯಲ್ಲಿ ಒಂದು ಬುತ್ತಿಯನ್ನು ಕಟ್ಟಿ ಕೊಟ್ಟು ಮತ್ತೊಂದು ಕಡೆ ಪುಸ್ತಕದ ಭಾರವನ್ನು ಮಕ್ಕಳ ಹೆಗಲಿಗೆ ಹೊರಿಸಿ ಕಳುಹಿಸುವ ತಾಯಂದಿರು. ಇದನ್ನು ಕಾಳಜಿ ಎನ್ನಬೇಕೆ ಅಥವಾ ಬದಲಾದ ಕಾಲದ ಒತ್ತಡ ಎನ್ನಬೇಕೇ ಒಂದೂ ಅರಿಯೆನು. ಎರಡು ದಿವಸ ನಿರಂತರ ಮಳೆ ಸುರಿದರೆ ಸಾಕು.. ನಿರಂತರ ಸುರಿಯುತ್ತಿರುವ ಮಳೆಯ ಕಾರಣದಿಂದ ಶಾಲಾ-ಕಾಲೇಜುಗಳಿಗೆ ರಜೆಯನ್ನು ಘೋಷಿಸಲಾಗಿದೆ ಎನ್ನುವ ಆದೇಶ ಹೊರ ಬೀಳುತ್ತದೆ. ವಿಧಿ ಇಲ್ಲದೆ ರಜೆ ಕೊಡಬೇಕಾದ ಪರಿಸ್ಥಿತಿ ಇಂದಿನದು. ಅಭಿವೃದ್ಧಿಯ ನೆಪದಲ್ಲಿ ಗುಡ್ಡ ಬೆಟ್ಟಗಳು ಸಮತಟ್ಟಾಗಿದೆ. ನೇರವಾದ ರಸ್ತೆಗಳು ಕಾಂಕ್ರಿಟೀಕರಣಗೊಂಡಿದೆ. ಹರಿದು ಹೋಗುವ ಹಳ್ಳ ತೋಡುಗಳು ಒತ್ತುವರಿಯಾಗಿದೆ. ಹರಿದು ಹೋಗುವ ನೀರಿಗೆ, ಜಾಗ ಇಲ್ಲದೆ ಮನೆ ಅಂಗಳ ತುಂಬುವ ಪರಿಸ್ಥಿತಿಯನ್ನು ನಾವೇ ನಿರ್ಮಾಣ ಮಾಡಿ ಆಗಿದೆ. ಮಕ್ಕಳಿಗೆ ರಜೆ ನೀಡದೆ ಇನ್ನೇನು ಮಾಡಬೇಕಾದೀತು...!!

ಮಳೆರಜೆಯನ್ನು ಮಕ್ಕಳು ಯಾವ ರೀತಿಯಾಗಿ ಸ್ವೀಕರಿಸುತ್ತಾರೆ ಎನ್ನುವಂಥಹದ್ದು ಮುಖ್ಯ. ಕೆಲಸಕ್ಕೆ ತೆರಳುವ ಪೋಷಕರಿಗೆ ಈ ಮಳೆ ರಜೆ ಬಿಸಿ ತುಪ್ಪದಂತಾಗುತ್ತದೆ. ಮಕ್ಕಳನ್ನು ಮನೆಯಲ್ಲಿ ಯಾರ ಉಪಸ್ಥಿತಿಯಲ್ಲಿ ಬಿಡಬೇಕು? ಅವರನ್ನು ಬಿಟ್ಟು ಹೋದರೆ ಏನು ಮಾಡಿಯಾರು? ಸುಮ್ಮನೆ ಕಾಲಹರಣ ಮಾಡಿದರೆ ಏನು ಮಾಡುವುದು? ಇಂತಹದೆಲ್ಲಾ ಪ್ರಶ್ನೆಗಳು ಅವರಲ್ಲಿ ಮೂಡುತ್ತದೆ. ರಜೆ ಮಾಡಿ ಮಕ್ಕಳ ಜೊತೆ ಇರುವೆನೆಂದರೆ ದೈನಂದಿನ ಹೊಟ್ಟೆ ಹೊರೆಯುವ ಒತ್ತಡ. ಯಾಕಾದರೂ ರಜೆ ಕೊಟ್ಟರಪ್ಪ ಎನ್ನುವಂತಹ ವೇದನೆ ಹೆತ್ತವರದ್ದು. ಕೆಲವು ಹೆತ್ತವರು ರಜೆ ಕೊಡದಿದ್ದರೆ ಈ ಮಳೆಗೆ ಶಾಲೆ ಬೇಕಿತ್ತಾ ಎನ್ನುವ ಮಾತು. ರಜೆ ಕೊಡದೆ ಇದ್ದರೆ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಿಲ್ಲ ಎನ್ನುವ ಹೆತ್ತವರ ಮಾತುಗಳು, ಏಕೆ ರಜೆ ಮಳೆಯೇ ಇಲ್ಲ ಎನ್ನುವ ದ್ವಂದ್ವದ ಮಾತುಗಳು. ಆದರೆ ಶಿಕ್ಷಕರ ಕಷ್ಟವನ್ನು ಅರಿಯುವವರಾರು..? ಒಂದೆಡೆ ಪಾಠ ಪ್ರವಚನಗಳನ್ನು ಮಾಡಬೇಕು, ಮಕ್ಕಳನ್ನು ಕ್ರಿಯಾಶೀಲರನ್ನಾಗಿ ಮಾಡಬೇಕು, ಮತ್ತೊಂದೆಡೆ ಚಟುವಟಿಕೆಗಳನ್ನು ನಿಗದಿತ ಸಮಯದೊಳಗೆ ಮುಗಿಸಬೇಕೆನ್ನುವ ಯೋಚನೆಗಳು ಭಾರವಾಗುತ್ತಾ ಸಾಗುತ್ತದೆ.

ರಜೆ ಎಂದಾಕ್ಷಣ ಶಿಕ್ಷಕರು ವಿಚಲಿತರಾಗುತ್ತಾರೆ. ಪಾಠ ಪ್ರವಚನಗಳನ್ನೆಲ್ಲಾ ಯಾವಾಗ ಪೂರ್ಣಗೊಳಿಸುವುದು ಎನ್ನುವ ಆಲೋಚನೆ. ಮುಂದೊಂದು ದಿನ ಬರುವ ಸುತ್ತೋಲೆ.ಮಳೆಯ ರಜೆಯನ್ನು ಶನಿವಾರ ಮತ್ತು ಮುಂದಿನ ರಜಾದಿನಗಳಲ್ಲಿ ಹೆಚ್ಚುವರಿ ತರಗತಿಗಳನ್ನು ನಡೆಸುವ ಮೂಲಕ ಶೈಕ್ಷಣಿಕ ಕರ್ತವ್ಯದ ಅವಧಿಗಳನ್ನು ಪೂರ್ಣ ಗೊಳಿಸುವುದು ಈ ಮಾಹಿ ತಿಯು ಶಿಕ್ಷಕರಿಗೆ ಸಂತೋಷ ನೀಡಿದರೂ ಮಕ್ಕಳ ಚಿಂತನೆ ಬೇರೆಯಾಗಿರುತ್ತದೆ. ಶನಿವಾರ ಎನ್ನು ವುದು ಮಕ್ಕಳಿಗೆ ಖುಷಿಯ ದಿನ. ಅರ್ಧ ದಿನ ಮಾತ್ರ ಶಾಲೆ ಎನ್ನುವಂತಹದ್ದು. ಅದು ಪೂರ್ಣ ದಿನ ಅಂದಾಗ ಮಕ್ಕಳು ಅದಕ್ಕೆ ಹೊಂದಿಕೊಳ್ಳಲು ಬಹಳ ಕಷ್ಟ ಪಡುತ್ತಾರೆ. ಪಾಠ ಪ್ರವಚನ ಕೇಳುವ ತಾಳ್ಮೆ ಇರುವುದಿಲ್ಲ. ಅದರ ಜೊತೆಗೆ ಮಕ್ಕಳಿಗೆ ಬೇರೆ ಚಟುವಟಿಕೆಗಳನ್ನು ಮಾಡಿದರೂ ಅದರಲ್ಲಿ ಭಾಗವಹಿಸುವ ಉತ್ಸಾಹವನ್ನು ತೋರಿಸುವ ಮಕ್ಕಳು ವಿರಳ. ಇದು ಶಿಕ್ಷಕರ ಮತ್ತು ಮಕ್ಕಳ ಪಾಡು.

ನಾವು ಆಲೋಚನೆ ಮಾಡಬೇಕಾದದ್ದು ಇಷ್ಟೇ.. ಮಳೆಯ ರಜೆಯು ಮಳೆಗೆ ಸೀಮಿತವಾಗದೆ ಆ ದಿನದಲ್ಲಿ ಯಾವ ಕಾರ್ಯವನ್ನು ಮಾಡಲು ಸಾಧ್ಯವೋ ಅದನ್ನು ಮಾಡಬೇಕು. ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಸುರಕ್ಷತೆಗಾಗಿ ರಜೆಯನ್ನು ಸರ್ಕಾರ ಘೋಷಣೆ ಮಾಡಿರುತ್ತದೆ. ರಜೆಯನ್ನು ವಿನಿಯೋಗಿಸುವ ಕೆಲಸವು ಮಕ್ಕಳ ಜವಾಬ್ದಾರಿ. ಅದನ್ನು ಅರಿಯು ವಂತೆ ಮಾಡುವ ಕೆಲಸ ಪೋಷಕರು ಮತ್ತು ಶಿಕ್ಷಕರದ್ದಾಗಿರುತ್ತದೆ. ಮಕ್ಕಳಿಗೆ ಒಳಾಂಗಣ ಚಟು ವಟಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿ ಮಕ್ಕಳು ಸಮಯವನ್ನು ಸದ್ವಿನಿಯೋಗ ಮಾಡುವಂತೆ ನೋಡಿಕೊಳ್ಳಬೇಕು. ಜೀವನ ಕೌಶಲ್ಯದ ಬಗ್ಗೆ ಅರಿವನ್ನು ನೀಡಬೇಕು. ಇಂತಹ ಕಾರ್ಯಗಳನ್ನು ಮಾಡಿದ್ದಾದಲ್ಲಿ ಮಳೆರಜೆಯು ಇನ್ನಷ್ಟು ಸಾರ್ಥಕವೆನಿಸುವುದು.

-ಶುಭ ತಾಳಿತ್ತನೂಜಿ, ಬಂಟ್ವಾಳ

# ಹೀಗೊಂದು ಸಂಭಾಷಣೆ



ಒಮ್ಮೆ ಅಮೇರಿಕಾದ ಪ್ರವಾಸಿಗ ಸ್ಟಾಕ್‌ಹೋಮ್‌ನ ಬಸ್ಸಿನಲ್ಲಿ ಹೋಗುತ್ತಿದ್ದ. ಅವನ ಪಕ್ಕದಲ್ಲಿ ಸ್ವೀಡಿಷ್ ಪ್ರಜೆ ಕುಳಿತಿದ್ದ. ಇಬ್ಬರೂ ಪರಸ್ಪರ ಪರಿಚಿತರಾದರು.ಹರಟೆಹೊಡೆಯಲಾರಂಭಿಸಿದರು. ಅಮೇರಿಕಾನ್ ಪ್ರಜೆ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ- ಜಗತ್ತಿನಲ್ಲಿಯೇ ಅಮೇರಿಕಾದಂಥ ಪ್ರಜಾಸತ್ತಾತ್ಮಕ ದೇಶ ಮತ್ತೊಂದಿಲ್ಲ. ವೈಟ್ ಹೌಸಿಗೆ ಹೋಗಿ ಅಧ್ಯಕ್ಷನನ್ನು ಭೇಟಿ ಮಾಡ ಬಹುದು. ಅವನ ಜೊತೆ ಕೈಕುಲುಕಬಹುದು. ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಬಹುದು. ಇವೆಲ್ಲಾ ಬೇರೆ ದೇಶಗಳಲ್ಲಿ ಸಾಧ್ಯವಿಲ್ಲ. ಅದರಲ್ಲೂ ನಿಮ್ಮ ದೇಶದಲ್ಲಂತೂ ಸಾಧ್ಯವೇ ಇಲ್ಲವೇನೋ?.

ಇದೇನು ಅಮೇರಿಕಾನ್ ಪ್ರವಾಸಿಗ ತನ್ನ ದೇಶದ ಬಗ್ಗೆ ಬಹಳ ಬಡಾಯಿ ಕೊಚ್ಚಿಕೊಳ್ಳುತ್ತಾನಲ್ಲ ಎಂದು ಸ್ವೀಡಿಷ್ ಪ್ರಜೆಗೆ ಅನಿಸಿತು. ಆತ ಅಷ್ಟು ಹೇಳಿದ ನಂತರ ತಾನೂ ತನ್ನ ದೇಶದ ಬಗ್ಗೆ ಹೇಳದಿದ್ದರೆ ಹೇಗೆ ಎಂದು ಅನಿಸಿತು. ನಿಮ್ಮದೇನು ಮಹಾ? ನಮ್ಮ ದೇಶದಲ್ಲಿ ರಾಜ ಮತ್ತು ಶ್ರೀಸಾಮಾನ್ಯ ಒಂದೇ ಬಸ್ಸಿನಲ್ಲಿ ಕುಳಿತುಕೊಂಡು ಪ್ರಯಾಣ ಮಾಡುತ್ತಾರೆ, ಗೊತ್ತಾ? ಎಂದ ಸ್ವೀಡಿಷ್ ಪ್ರಜೆ. ಅಷ್ಟೊತ್ತಿಗೆ ಮುಂದಿನ ಸ್ಟಾಪ್ ಬಂತು. ಸ್ವೀಡಿಷ್ ಪ್ರಜೆ ಬಸ್ಸಿನಿಂದ ಇಳಿದು ಹೋದ. ಅವರಿಬ್ಬರ ಸಂಭಾಷಣೆಯನ್ನು ಮತ್ತೊಬ್ಬ ಕೇಳಿಸಿಕೊಳ್ಳುತ್ತಿದ್ದ.

ನಿಮ್ಮ ಪಕ್ಕದಲ್ಲಿ ಕುಳಿತಿದ್ದವ ಯಾರು ಗೊತ್ತಾಯಿತಾ? ಎಂದು ಕೇಳಿದಕ್ಕೆ ಅಮೇರಿಕಾದ ಪ್ರವಾಸಿಗ ಗೊತ್ತಿಲ್ಲ ಎಂದು ತಲೆ ಅಲ್ಲಾಡಿಸಿದ.

ಆತನೇ ಸ್ವೀಡನ್‌ನ ಆರನೇ ರಾಜ ಗುಸ್ತಾಫ್ ಅಡಾಲ್ಫ್!

**ಆರೋಗ್ಯ**

ಶ್ರೀಮತಿ: ತವರಿಂದ ಬಂದ ಮೇಲೆ ಈಗ ನಿನ್ನ ಆರೋಗ್ಯ ಹೇಗಿದೆ?

ತಾರಾ: ಪರವಾಗಿಲ್ಲ ಈಗ ಸುಧಾರಿಸಿದೆ. ತವರಲ್ಲಿ ಎಲ್ಲಾ ಕೆಲಸ ನಾನೇ ಮಾಡಿ, ಮಾಡಿ ಆರೋಗ್ಯ ಹದಗೆಟ್ಟಿತ್ತು. ಈಗ ಗಂಡನ ಮನೆಯಲ್ಲಿ ಎಲ್ಲವನ್ನು ಅವರೇ ಮಾಡೋದ್ರಿಂದ ಆರಾಮಾಗಿದ್ದೀನಿ.

**ಮಾವನ ಸಲುವಾಗಿ**

ಶ್ರೀಮತಿ: ರೀ, ಪಕ್ಕದ್ಮನೆ ತಾರಾಳ ಗಂಡ ದಿನಾಲೂ ಸೂಟ್ ಕೇಸ್ ತುಂಬ ಲಂಚದ ಹಣ ತರ್ತಾರೆ. ನೀವೂ ಇದೀರಾ, ಒಂದು ದಿನಾನೂ ನಯಾ ಪೈಸೆ ತರಲ್ಲ.

ಸೂರಿ: ಅವನು ಮಾವನ ಸಲುವಾಗಿ ದುಡ್ಡು ಕೂಡಿಸ್ತಿದಾನೆ ಕಣೇ.

ಶ್ರೀಮತಿ: ಅವರ ಮಾವ ಯಾರು?

ಸೂರಿ: ಲೋಕಾಯುಕ್ತದವರು. ಹೀಗೆ ಸೂಟ್‌ಕೇಸ್ ಮೇಲೆ ಸೂಟ್‌ಕೇಸ್ ತಂದ್ರೆ, ಅದನ್ನು ಎಕ್ಕೊಂಡು ಹೋಗೋಕೆ ಬರ್ತಾರೆ !

**ಒಪ್ಪಬೇಕಲ್ಲ**

ಗಾಂಪ: ನೋಡೊ, ಪಕ್ಕದ್ಮನೆ ತಾರಾ ಗಂಡನ ಜೊತೆ ವಾರಕ್ಕೊಮ್ಮೆಯಾದ್ರೂ ಸಿನಿಮಾ ನೋಡೋಕೆ ಹೋಗ್ತಾಳೆ. ನೀನ್ಯಾಕೆ ಹೋಗಬಾರದು?

ಸೂರಿ: ಹೋಗಬೇಕು ಅಂತ ನನಗೂ ಆಸೆ ಇದೆ. ಆದರೆ, ತಾರಾ ಒಪ್ಪಬೇಕಲ್ಲ.

**ಶಬ್ಧ**

ಸೂರಿ: ಮುಂಜಾನೆ ನಿಮ್ಮ ಮನೆಯಲ್ಲೇನೋ ಶಬ್ದ ಬಂತಲ್ಲ, ಏನದು?

ಗಾಂಪ: ಅದಾ? ನನ್ನ ಹೆಂಡತಿ ಬೈತಾ ಇದ್ಲು ಅದಕ್ಕೆ ಹೊರಗೆ ಕೇಳಿಸ್ತದೆ ಅಂತ ಡಬ್ಬ ಬಾರಿಸ್ತಿದ್ದೆ.

**ದೀಪಾವಳಿ**

ಶ್ರೀಮತಿ: ಪಕ್ಕದ ಮನೆ ತಾರಾ ಈ ಸಲ ದೀಪಾವಳಿಗೆ ತವರು ಮನೆಗೆ ಹೋಗಲ್ಲ ಅಂತೆ ರೀ.

ಸೂರಿ: ಪರವಾಗಿಲ್ಲ ಅವಳು ಹೋಗದಿದ್ದರೆ ಏನಾಯ್ತು, ನೀನು ಹೋಗು.

ಶ್ರೀಮತಿ: ಅಯ್ಯೋ, ನಾನೂ ಹೋಗಲ್ಲ ರೀ,

ಸೂರಿ: ಯಾಕೆ?

ಶ್ರೀಮತಿ: ನೀವು ಇಲ್ಲೇ ಇರ್ತೀರಲ್ಲ ಅದಕ್ಕೆ !

**ಮಾರಾಟ**

ಸೂರಿ: ಮೊನ್ನೆ ನಿಮ್ಮ ಕವನ ಸಂಕಲನ ಬಿಡುಗಡೆ ಆಯ್ತಲ್ಲ, ಅದನ್ನು ಎಷ್ಟು ಮಂದಿ ತೆಗೆದುಕೊಂಡರು?

ಗಾಂಪ: ಅಂದಾಜು ನೂರು ಪ್ರತಿ.

ಸೂರಿ: ಅಬ್ಬಾ, ಅಷ್ಟು ಮಂದಿ ಕೊಂಡುಕೊಂಡರಾ?

ಗಾಂಪ: ಇಲ್ಲ, ವೇದಿಕೆಯ ಮೇಲಿದ್ದವರಿಗೆ ಹೋದವು.

# ಬಹುತೇಕ ದುಃಖಗಳಿಗೆ ನಾವೇ ಕಾರಣರು !

ಇಂದು ಬಹುತೇಕ ದುಃಖಗಳಿಗೆ ನಾವು ಹೇಗೆ ಕಾರಣರಾಗುತ್ತೇವೆ? ನೋಡೋಣ. ಈ ಕಥೆ ಓದಿ. ದೇವರು, ಈ ಸುಂದರ ಭೂಮಂಡಲವನ್ನು ರಚಿಸಿದನು. ಅದ್ಭುತ ನಿಸರ್ಗವನ್ನು ರೂಪಿ ಸಿದ. ಬಗೆ ಬಗೆಯ ಪ್ರಾಣಿ, ಪಕ್ಷಿ, ಜಲಚರಗಳು, ಗಿಡ ಮರ, ಬಳ್ಳಿಗಳನ್ನು ರೂಪಿಸಿದ. ಕಡೆಯ ದಾಗಿ ಬುದ್ಧಿವಂತ ಮಾನವನನ್ನು ರೂಪಿಸಿದ. ಆತ ಎಲ್ಲಾ ಪ್ರಾಣಿ ಪಕ್ಷಿಗಳಿಗಿಂತ ಸುಂದರ ಮನಸ್ಸನ್ನು ಮಾನವನಿಗೆ ಅಳವಡಿಸಿದನು. ಯಾವ ಪ್ರಾಣಿಗಳಿಗೂ ಇಲ್ಲದ ಬುದ್ಧಿಯನ್ನು ರೂಪಿಸಿದನು. ಸುಂದರ ದೇಹವನ್ನು ರೂಪಿಸಿದ. ಆತನಿಗೆ ಒಂದು ಇಚ್ಛೆಯಾಯಿತು. ನಾನು ಈ ಸುಂದರ ಜಗತ್ತನ್ನು ರೂಪಿಸಿದ್ದೇನೆ, ಈ ನನ್ನ ಜಗತ್ತಿನ ಬಗ್ಗೆ ಪ್ರಾಣಿ ಪಕ್ಷಿಗಳು ಮತ್ತು ಮನುಷ್ಯನ ಅಭಿಪ್ರಾಯ ಹೇಗಿದೆ? ಎಂದು ತಿಳಿದುಕೊಳ್ಳಲು, ಬೇರೆ ಬೇರೆ ಪಕ್ಷಿ, ಪ್ರಾಣಿ, ಮನುಷ್ಯರ ಮುಖಂಡರನ್ನು ಆಹ್ವಾನಿಸಿದನು. ಮುಖಂಡ ಪಕ್ಷಿಗಳು, ಮುಖಂಡ ಪ್ರಾಣಿಗಳು ಹಾಗೂ ಮುಖಂಡ ಮನುಷ್ಯ ಎಲ್ಲರೂ ದೇವನ ಸಮೀಪಕ್ಕೆ ಹೋದರು. ಪ್ರಾಣಿ, ಪಕ್ಷಿಗಳು ಬರಿ ಕೈಯಲ್ಲಿ ಹೋಗಿದ್ದವು. ಮನುಷ್ಯ ಮೂಟೆಯೊಂದಿಗೆ ಹೋಗಿದ್ದನು. ದೇವನಿಗೆ ಸಂತೋಷವಾಯಿತು. ಈ ಮನುಷ್ಯ ನನ್ನ ಜಗತ್ತಿನ ವೈಭವವನ್ನು ಹೇಳಲು ಇಷ್ಟೊಂದು ವಿಷಯ ಸಂಗ್ರಹಿಸಿಕೊಂಡು ಬಂದಿದ್ದಾನೆ ಎಂದು. ಮೊದಲಿಗೆ ಪಕ್ಷಿಗಳಿಗೆ ಕೇಳಿದ, ನನ್ನ ಜಗತ್ತು ಹೇಗಿದೆ? ಎಂದು. ಪಕ್ಷಿ ಹೇಳಿತು, ಎಂತಹ ಅದ್ಭುತ ಜಗತ್ತು! ತಿನ್ನಲು ಕೊರತೆ ಇಲ್ಲ, ಕುಡಿಯಲು ಕೊರತೆಯಿಲ್ಲ, ಹಾರಾಡಿ, ಹಾಡಿ ನಿನ್ನ ನಿಸರ್ಗದ ವೈಭವ ನೋಡುತ್ತಿದ್ದರೆ ಸ್ವರ್ಗ ಬೇರಿಲ್ಲ ಎಂದಿತು. ಹಾಗಾಗಿ ನಾನು, ನನ್ನ ಧ್ವನಿಯ ಮೂಲಕ ನಿನ್ನ ನಿಸರ್ಗ ಸಂಗೀತ ಮಾಡಿ ಶ್ರೀಮಂತ ಮಾಡಿದ್ದೇನೆ ಎಂದಿತು.

ಪ್ರಾಣಿಗಳನ್ನು ಕೇಳಿದ, ಹೇಗಿದೆ ನನ್ನ ಜಗತ್ತು? ಎಂದು. ಪ್ರಾಣಿಗಳು ಹೇಳಿದವು, ನಿನ್ನ ಜಗತ್ತು ಅದ್ಭುತ! ನಮಗೆ ಬೇಕಾದ ಆಹಾರ, ನೀರು, ನಾವು ತಿರುಗಾಡುವಲ್ಲೆಲ್ಲ ಇದೆ. ನಮ ಗೇನು ಕೊರತೆ ಇಲ್ಲ. ಕೊರತೆ ಇಲ್ಲದಂತೆ ನಿರ್ಮಿಸಿದೆಯಲ್ಲ ನಿನಗೆ ನಮ್ಮ ಸವಿನಯ ಪ್ರಣಾಮ ಸಲ್ಲಿಸಲು ಬಂದಿದ್ದೇನೆ ಅಂದಿತು. ಮೀನನ್ನು ಕೇಳಿದ, ಹೇಗಿದೆ ನನ್ನ ಜಗತ್ತು? ಎಂದು. ಆಗ ಮೀನು ಹೇಳಿತು, ದೇವನೇ ನನಗೇನು ಕೊರತೆ ಇಲ್ಲ, ತೃಪ್ತಿಯಿಂದ ಇದ್ದೇನೆ, ನಿನಗೆ ನನ್ನ ನಮಸ್ಕಾರ ಎಂದಿತು. ಕಡೆಗೆ ಮಾನವನನ್ನು ಪ್ರಶ್ನಿಸಿದ. ಈಗ ನೀನು ಹೇಳು ಹೇಗಿದೆ ನನ್ನ ಜಗತ್ತು? ಎಂದು. ಏಕೆಂದರೆ ನೀನು ಹೊತ್ತು ತಂದಿರುವ ವರದಿ ಹೆಚ್ಚು ಇದೆ. ಇದನ್ನು ಕೇಳಿ ಇಲ್ಲಿ ಬಂದಿರುವ ಎಲ್ಲಾ ಪಕ್ಷಿ, ಪ್ರಾಣಿಗಳು ಸಂತೋಷಪಡಲಿ ಎಂದನು. ಆಗ ಮನುಷ್ಯ ತನ್ನ ಹೊರೆ ಬಿಚ್ಚಿ ಹೇಳಿದ. ಏನಂತ ಹೇಳಲಿ ದೇವನೇ. ನೀನು ನಮಗೆ ಬಹಳ ಅನ್ಯಾಯ ಮಾಡಿದೆ. ಇಲ್ಲಿ ಬರೆದು ತಂದಿರುವುದೆಲ್ಲ ನೀನು ಮಾಡಿರುವ ಅನ್ಯಾಯ ಎಂದನು. ಏನು ಅನ್ಯಾಯ? ಎಂದು ಭಗವಂತ ಕೇಳಿದ. ಎಷ್ಟು ಅಂತ ಹೇಳಲಿ ಭಗವಂತನೇ. ಪಕ್ಷಿಗಳು ಹಾರುತ್ತವೆ, ಅದಕ್ಕೆ ರೆಕ್ಕೆ ಅಳವಡಿಸಿದೆ, ನಮಗೆ ರೆಕ್ಕೆ ಅಳವಡಿಸಲಿಲ್ಲ, ನಮಗೆ ಹಾರದಂತೆ ಮಾಡಿದೆ. ಮೀನುಗಳು ಈಜುತ್ತವೆ. ಅದಕ್ಕೆ ಈಜುರಕ್ಕೆ ಮಾಡಿದೆ. ನಮಗೆ ಈಜು ರಕ್ಕೆಗಳು ಇಲ್ಲ. ಮೀನಿನಂತೆ ನೀರಿನಲ್ಲಿ ಈಜಿ ಅಲ್ಲೇ ಇರಲು ಸಾಧ್ಯವಿಲ್ಲ. ಪ್ರಾಣಿಗಳಿಗೆ ನಾಲ್ಕು ಕಾಲು ನೀಡಿದೆ. ಅವು ವೇಗವಾಗಿ ಓಡು ತ್ತವೆ. ನಮಗೆ ಎರಡೇ ಕಾಲು ನೀಡಿದೆ. ಅವು ನಮ್ಮನ್ನು ಬೆನ್ನಟ್ಟಿದರೆ ಓಡಲು ಆಗುವುದಿಲ್ಲ. ನಮಗೆ ಕುಳಿತಲ್ಲೇ ಹಣ್ಣು ಸಿಗದಂತೆ ಮಾಡಿದೆ. ಬೇಕೆಂದಾಗ ನೀರು ಸಿಗದಂತೆ ಮಾಡಿದೆ. ನೀರು ಇರುವಲ್ಲಿ ಹುಡುಕಿಕೊಂಡು ಹೋಗುವಂತೆ ಮಾಡಿದೆ. ಒಂದರಂತೆ ಒಂದಿಲ್ಲ. ಕೆಲವರು ಶ್ರೀಮಂತರು, ಕೆಲವರು ಬಡವರು, ಕೆಲವರು ಸ್ವರೂಪರು, ಕೆಲವರು ಕುರೂಪರು, ಕೆಲವರು ಬಲಿಷ್ಠರು, ಕೆಲವರು ದುರ್ಬಲರು, ಅಷ್ಟೊಂದು ತಾರತಮ್ಯ ಮಾಡಿದೆ. ಬೇಕೆಂದಾಗ ಮಳೆ ಬೀಳದೆ, ಬೇಕಾದ ಕಡೆ ಮಳೆ ಬೀಳದೆ, ಎಲ್ಲಾ ಕಡೆ ಮಳೆ ಸುರಿಸುವೆ. ಹೀಗೆ ತನ್ನ ಬುದ್ಧಿ ಬಳಸಿ, ಬೇರೆಬೇರೆ ಪಕ್ಷಿ ಮತ್ತು ಪ್ರಾಣಿಗಳೊಂದಿಗೆ ಮತ್ತು ಇತರೆ ಮನುಷ್ಯರೊಂದಿಗೆ ಹೋಲಿಸಿಕೊಂಡು, ಕೊರತೆಯನ್ನು ಪಟ್ಟಿ ಮಾಡಿಕೊಂಡು, ಹೋಗಿದ್ದನು. ಆಗ ಭಗವಂತ ಹೇಳಿದ ಇನ್ನು ಮನುಷ್ಯ ನನ್ನು ಕೇಳುವುದೇ ಬೇಡ ಎಂದು ಅಂದೇ ತೀರ್ಮಾನಿಸಿದ.



- **ಈ ಕಥೆ ವಿಶ್ಲೇಷಿಸಿದರೆ ನಮ್ಮ ದುಃಖದ ಕಾರಣಗಳು ತಿಳಿಯುತ್ತದೆ.**
- **ಮನುಷ್ಯ, ಬೇರೆ ಪ್ರಾಣಿಗಳು, ಪಕ್ಷಿಗಳೊಂದಿಗೆ ಹೋಲಿಸಿಕೊಂಡು, ಅವುಗಳಲ್ಲಿ ಇರುವ ವಿಶೇಷತೆ ತನಗೆ ಇಲ್ಲ ಎಂದು ಕೊರಗುತ್ತಾ ದುಃಖ ಪಡುತ್ತಾನೆ.**
- **ಮನುಷ್ಯ, ಕೇವಲ ಪ್ರಾಣಿ ಅಷ್ಟೇ ಅಲ್ಲ ಮತ್ತೊಬ್ಬನೊಂದಿಗೆ ಹೋಲಿಸಿಕೊಂಡು, ತನ್ನಲ್ಲಿ ಇಲ್ಲದಿರುವುದನ್ನು ನೆನೆದು ದುಃಖ ಪಡುತ್ತಾನೆ.**
- **ಬೇರೆಯವರ ತಪ್ಪನ್ನು ಗುರುತಿಸಿ, ಮತ್ತೆ ಮತ್ತೆ ನೆನೆಸಿಕೊಂಡು, ಬೇರೆಯವರ ಮುಂದೆ ಆ ತಪ್ಪನ್ನು ತೋರಿಸಿ ದುಃಖ ಪಡುತ್ತಾನೆ.**
- **ತಾನು ಮಾಡಿದ ತಪ್ಪನ್ನು ಮತ್ತೆ ಮತ್ತೆ ನೆನೆಸಿಕೊಂಡು ದುಃಖ ಪಡುತ್ತಾನೆ.**
- **ತನ್ನಲ್ಲಿರುವ ವಸ್ತುಗಳನ್ನು ಬೇರೆಯವರ ವಸ್ತುಗಳೊಂದಿಗೆ ಹೋಲಿಸಿಕೊಂಡು ಕೊರತೆಯಿದ್ದಲ್ಲಿ ದುಃಖ ಪಡುತ್ತಾನೆ.**
- **ತನ್ನಲ್ಲಿ ಇರುವ ಕೊರತೆ ನೆನೆದು ದುಃಖಿಸುತ್ತಾನೆ.**
- **ತನ್ನ ಮತ್ತು ಬೇರೆಯವರ ದೋಷ ಗುರುತಿಸಿ ದುಃಖ ಪಡುತ್ತಾನೆ .**
- **ಮನುಷ್ಯ ಬುದ್ಧಿವಂತ, ಹಾಗಾಗಿ ತನ್ನ ಬುದ್ಧಿವಂತಿಕೆಯನ್ನು ವಸ್ತುಗಳನ್ನು ಹೋಲಿಸಲು, ಎಣಿಸಲು, ಶ್ರೇಷ್ಠತೆ, ಕನಿಷ್ಠತೆ, ಸುಂದರ, ಕುರೂಪ ಗುರ್ತಿಸಲು, ತೂಕ ಮಾಡಲು, ವಿಮರ್ಶೆ ಮಾಡಲು ಅತಿಯಾಗಿ ಬಳಸುತ್ತಾನೆ.**
- **ಕಳೆದು ಹೋದ ಸಂಗತಿ ವಸ್ತುಗಳಿಗೆ ದುಃಖಿಸುತ್ತಾನೆ.**
- **ಮುಂದೆ ಬರಲಿರುವ ಸಂಗತಿಗಾಗಿ ದುಃಖಿಸುತ್ತಾನೆ.**
- **ಇರುವ ವಸ್ತು ಹೋಗುತ್ತಲ್ಲ ಅಂತ ದುಃಖಿಸುತ್ತಾನೆ.**
- **ಸಂಶಯದಿಂದ ದುಃಖಿತಾಗುತ್ತಾನೆ.**

**ಹಾಗಾದರೆ ಸಂತೋಷ ಪಡಲು ಏನು ಮಾಡಬೇಕು..?**

- **ಮತ್ತೊಬ್ಬರೊಂದಿಗೆ ಹೋಲಿಸಬಾರದು.**
- **ಬೇರೆಯವರ ವಸ್ತುಗಳೊಂದಿಗೆ ನಮ್ಮ ವಸ್ತು ಹೋಲಿಸಬಾರದು.**
- **ಬೇರೆಯವರ ದೋಷ ಗುರುತಿಸಬಾರದು.**
- **ಬೇರೆಯವರ ತಪ್ಪನ್ನು ಗುರುತಿಸಬಾರದು.**
- **ತನ್ನ ದೋಷ, ತಪ್ಪನ್ನು ನೆನೆಸಿಕೊಳ್ಳಬಾರದು.**
- **ವಸ್ತುಗಳ ಮಹತ್ವ ಅರಿಯಬೇಕು. ಅರಿತು ಅನುಭವಿಸಿ, ಸಂತೋಷಪಡಬೇಕು.**
- **ಇರುವುದು ಮಹತ್ವ ವಿನಃ ಇಲ್ಲದ್ದು ಮಹತ್ವದಲ್ಲ.**
- **ಕಳೆದು ಹೋದ ವಸ್ತು ಮತ್ತು ಸಂಗತಿಯನ್ನು ನೆನಸಬಾರದು.**
- **ಬರುವ ಸಂಗತಿಗಳನ್ನು ಕೂಡ ನೆನೆಸಬಾರದು.**
- **ಇರುವ ವಸ್ತುಗಳನ್ನು ಸುಂದರವಾಗಿ ಬಳಸಬೇಕೇ ವಿನಃ ಕಳೆದಿತು ಎನ್ನುವ ಬಗ್ಗೆ ದುಃಖಿ ಸಬಾರದು.**
- **ಎಲ್ಲರಲ್ಲೂ ವಿಶ್ವಾಸದಿಂದಿರಬೇಕು.**

ನಿಸರ್ಗ ಎಲ್ಲರಲ್ಲೂ ಒಂದೇ ಸಾಮರ್ಥ್ಯ, ರೂಪ, ಬಣ್ಣ, ಧ್ವನಿ, ಶಕ್ತಿ, ಮತ್ತು ಸಾಮರ್ಥ್ಯ ಅಳವಡಿಸಿಲ್ಲ. ಏಕೆಂದರೆ ನಿಸರ್ಗ ಅಷ್ಟು ವೈವಿಧ್ಯಮಯ. ಎಲ್ಲಾ ಒಂದೇ ರೂಪ, ಬಣ್ಣ, ಶಕ್ತಿ, ಸಾಮರ್ಥ್ಯ ಇದ್ದಲ್ಲಿ ಜಗತ್ತು ಆಕರ್ಷಕವಾಗಿ ಇರುತ್ತಿರಲಿಲ್ಲ. ಹಾಗಾಗಿ ತನ್ನಲ್ಲಿ ಇಲ್ಲದಿರುವುದನ್ನು ಬೇರೊಬ್ಬರ ಬಳಿ ಇದ್ದಾಗ ಅದನ್ನು ಅಭಿನಂದಿಸಿ, ಆನಂದಿಸಬೇಕೆ ವಿನಹ ಕೊರಗುವುದಲ್ಲ. ಯಾಕೆ ಅಂದರೆ ಆ ಎಲ್ಲಾ ವಸ್ತು, ಶಕ್ತಿ ಮತ್ತು ಸಾಮರ್ಥ್ಯ ನನ್ನ ಬಳಿ ಇಲ್ಲ ಅದಕ್ಕೆ. ಜೀವನ ಎಂದರೇನು? ಜೀವನ ಎಂದರೆ ನಿಸರ್ಗ ಏನು ಅಳವಡಿಸಿದೆ, ಅದನ್ನು ಬಳಸಿ ಸಂತೋಷ ಪಡುವುದು. ಹಾಗಂದರೇನು?. ನಿಸರ್ಗ ನಮ್ಮಲ್ಲಿ ಕಣ್ಣು ಇಟ್ಟಿದೆ, ಅದನ್ನು ಬಳಸು, ಕಿವಿ ಬಳಸು, ಮೂಗು ಬಳಸು, ನಾಲಿಗೆ ಬಳಸು, ಕೈ ಬಳಸು, ಕಾಲು ಬಳಸು, ಮನಸ್ಸು ಬಳಸು, ಬುದ್ಧಿ ಬಳಸು, ನಿನಗೆ ದೊರೆತ ವಸ್ತು ಬಳಸು ಮತ್ತು ಜನರೊಂದಿಗೆ ವ್ಯವಹರಿಸು. ಇದೇ ಜೀವನ. ಹೇಗೆ ಬಳಸಬೇಕು ಅನ್ನುವುದು ಮಹತ್ವ?. ಅದೇ ನೀತಿ. ಏನು ಒಳ್ಳೆಯದಿದೆ ? ಅದಕ್ಕೆ ಬಳಸಬೇಕು. ಯಾವುದನ್ನು ಹೇಗೆ ಬಳಸಿದರೆ ಸಂತೋಷವಾಗುತ್ತದೆಯೊ ಹಾಗೆ ಬಳಸಬೇಕು.

ದುಃಖ ಆಗುವಂತೆ ಬಳಸಬಾರದು. ನಿಸರ್ಗ ನಮ್ಮಲ್ಲಿ ಅಳವಡಿಸಿರುವುದನ್ನು, ನಮಗೆ ದೊರಕಿರುವುದನ್ನು ಬಳಸಬೇಕೆ ವಿನಃ ದೊರೆಯುದದ್ದನ್ನಲ್ಲ. ವಸ್ತುವನ್ನು ಯಥಾವತ್ತಾಗಿ ನೋಡಬೇಕು. ಆದರೆ ನಾವು ಹಾಗೆ ನೋಡುವುದಿಲ್ಲ. ನೋಡುವಾಗ ತನ್ನದ್ದಾಗಿ, ಅನ್ಯರದ್ದಾಗಿ ಅಂತ ನೋಡುತ್ತೇವೆ. ದೊಡ್ಡದು ಅಥವಾ ಸಣ್ಣದು, ಒಳ್ಳೇದು ಅಥವಾ ಕೆಟ್ಟದ್ದು. ಸುಂದರ ಅಥವಾ ಕುರೂಪ. ಹೀಗೆ ಯಾವುದೋ ಒಂದು ದೃಷ್ಟಿಯಲ್ಲಿ ನೋಡುತ್ತೇವೆ. ಹಾಗೆ ನೋಡಿ ದಾಗ ವಸ್ತುವಿನ ನಿಜವಾದ ಜ್ಞಾನ ನಮಗೆ ದೊರಕುವುದಿಲ್ಲ. ಹೇಗಿದ್ಯೋ ಹಾಗೆ ಸುಮ್ಮನೆ ನೋಡಬೇಕು. ಹಾಗೆ ಸುಮ್ಮನೆ ನೋಡಲು ಆಗದಿದ್ದರೆ, ಒಳ್ಳೆಯದು ಅಂತ ನೋಡಬೇಕು. ಸುಂದರ ಅಂತ ನೋಡಬೇಕು. ದಿವ್ಯ ಅಂತ ನೋಡಬೇಕು. ಪವಿತ್ರ ಅಂತ ನೋಡಬೇಕು. ಆಗ ಸಂತೋಷವಾಗುತ್ತದೆ. ಅದನ್ನು ಬಿಟ್ಟು ಕೆಟ್ಟದ್ದು, ಅಂತ ನೋಡಿದರೆ ಕುರೂಪ ಅಂತ ನೋಡಿದರೆ ಸಣ್ಣದು ಅಂತ ನೋಡಿದರೆ, ನನ್ನದಲ್ಲ ಅಂತ ನೋಡಿದರೆ, ದುಃಖವಾಗುತ್ತದೆ. ನೋಡುವ ದೃಷ್ಟಿಯು ಕೂಡ ಸುಖ-ದುಃಖಕ್ಕೆ ಕಾರಣವಾಗುತ್ತದೆ. ಮೇಲೆ ಹೇಳಿದ್ದರಲ್ಲಿ ಕೊರತೆಯಾದರೆ ಅದು ಸುಂದರ ಜೀವನವಲ್ಲ. ಸುಂದರ ಜೀವನಕ್ಕೆ ಬೇಕಾದವುಗಳನ್ನು ನಿಸರ್ಗ ನಮ್ಮ ದೇಹ ದಲ್ಲಿ ಅಳವಡಿಸಿದೆ ಮತ್ತು ಜೀವನಕ್ಕೆ ಬೇಕಾದದ್ದೆಲ್ಲ ನಿಸರ್ಗದಲ್ಲಿ ಇಟ್ಟಿದೆ. ನಾವು ಅನುಭವಿಸಲು ಬಂದವರು ಅನ್ನುವುದನ್ನು ಮರೆಯಬಾರದು. ಆದರೆ ಅನುಭವಿಸುವುದನ್ನು ಬಿಟ್ಟು, ಸಂಗ್ರಹಿಸಲು ತೊಡಗಿರುವುದೇ ದುಃಖಕ್ಕೆ ಕಾರಣ. ಅಲ್ಲವೇ?

-ಎಂ.ಪಿ. ಜ್ಞಾನೇಶ್, ಮಂಗಳೂರು



# ಅರ್ಥಪೂರ್ಣ ಬಸವ ಸಂಸ್ಕೃತಿ ಅಭಿಯಾನ

• ಪ್ರಜೋದಯ ವರದಿ

**ಹಾಸನ:** ವಿಶ್ವಗುರು ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕನೆಂದು ಘೋಷಿಸಿ ಒಂದು ವರ್ಷ ಪೂರೈಸಿದ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಕೈಗೊಂಡಿರುವ ಬಸವ ಸಂಸ್ಕೃತಿ ಅಭಿಯಾನ ಭಾನುವಾರ ನಗರದಲ್ಲಿ ಅರ್ಥಪೂರ್ಣವಾಗಿ ನೆರವೇರಿತು.

ಜಿಲ್ಲೆಯ ವಿವಿಧ ಭಾಗಗಳಿಂದ ಸಮಾಜ ಬಾಂಧವರು ಆಗಮಿಸಿದ್ದರು. ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ವಿವಿಧ ಮಠಾಧೀಶರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಮಧ್ಯಾಹ್ನ 2 ಗಂಟೆಗೆ ಚಿಕ್ಕಮಗಳೂರಿನಿಂದ ಆಗಮಿಸಿದ ಬಸವ ಸಂಸ್ಕೃತಿ ಅಭಿಯಾನ ರಥವನ್ನು ತಣ್ಣೀರುಹಳ್ಳ ಮಠದ ಎದುರು ಸ್ವಾಗತಿಸಲಾಯಿತು. ಜಿಲ್ಲಾಧಿಕಾರಿ ಕಚೇರಿಗೆ ಬಂದ ರಥಕ್ಕೆ ಪೂಜೆ ಸಲ್ಲಿಸಿ ವಿವಿಧ ವಾದ್ಯ ಮೇಳದೊಂದಿಗೆ ಹಾಸನಾಂಬ ಕಲಾಕ್ಷೇತ್ರಕ್ಕೆ ಕರೆತರಲಾಯಿತು. ಸಂಜೆ 5 ಗಂಟೆಗೆ ವೇದಿಕೆ ಕಾರ್ಯಕ್ರಮದ ಬಳಿಕ ಜಂಗಮದಡಿಗೆ ಎಂಬ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

**ಭಾವನೆಗೆ ಜೀವ ತುಂಬಿದ ಬಸವಣ್ಣ:** ಸಂವಾದದಲ್ಲಿ ಮಾತನಾಡಿದ ಗದಗದ ಯಡಿಯೂರು ಶ್ರೀ ತೊಂಟದಾರ್ಯ ಸಂಸ್ಥಾನ ಮಠದ ಡಾ. ಶ್ರೀ ಸಿದ್ದರಾಮ ಸ್ವಾಮೀಜಿ ಮಾತನಾಡಿ, ಮನುಷ್ಯನ ದೇಹವೇ ದೇವಾಲಯ, ಶಿರವೇ ಕಳಸ. ಈ ಭಾವನೆಗೆ ಜೀವ ತುಂಬಿದವರು ಬಸವಣ್ಣ ಎಂದರು.

## ಅದ್ದೂರಿ ಮೆರವಣಿಗೆ | ಜಂಗಮದಡಿಗೆ ನಾಟಕ ಪ್ರದರ್ಶನ



### ವೀರಶೈವ ಲಿಂಗಾಯತ ಸಂಘಟನೆ ಅಗತ್ಯವಿದೆ

ಬಾಲ್ಕಿ ಹೀರೆಮಠದ ಡಾ. ಶ್ರೀ ಬಸವಲಿಂಗ ಪಟ್ಟದೇವರು ಸ್ವಾಮೀಜಿ ಮಾತನಾಡಿ, ವೀರಶೈವ ಲಿಂಗಾಯತ ಸಮಾಜದ ಸಂಘಟನೆಯ ಅಗತ್ಯವಿದೆ. ಬಸವ ತತ್ವವನ್ನು ಎಲ್ಲರೂ ಪಾಲಿಸಬೇಕೆಂದರು.
ಸಂಜೆ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅ. 5 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಗಾಯತ್ರಿ ವಿಹಾರದಲ್ಲಿ ಅಭಿಯಾನದ ಸಮಾರೋಪ ನಡೆಯಲಿದೆ ಎಂದರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆದ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಮಾತನಾಡಿ, ದೇವಾಲಯಕ್ಕೆ ಹೋಗುವುದೇ ಧರ್ಮವಲ್ಲ, ಇಷ್ಟಲಿಂಗವೇ ಶಾಶ್ವತ ದೇವಾಲಯ. ಪೂಜಾರಿ ಮಾಡಿದ ಪೂಜೆಯ ಬದಲು ಪ್ರತಿಯೊಬ್ಬರೂ ತಾವೇ ಮಾಡುವ ಪೂಜೆಯೇ ನಿಜವಾದ ಧರ್ಮಾಚರಣೆ ಇದನ್ನು ಬಸವಣ್ಣನವರು ಕೊಟ್ಟ ಸಂದೇಶ ಎಂದು ಹೇಳಿದರು.

ಇಷ್ಟಲಿಂಗವನ್ನು ಬಸವಣ್ಣನವರು ಕೊಟ್ಟಿದ್ದು, ಪೂಜಾರಿ ಪೂಜೆ ಮಾಡಿದರೇ ನಿಮಗೆ ಪ್ರಯೋಜನವಿಲ್ಲ. ನಾವು ಯಾವಾಗ ಬೇಕು ಆವಾಗ ಪೂಜೆ ಮಾಡಬಹುದು. ಕೊರೊನಾ ಸಮಯದಲ್ಲಿ ಎಲ್ಲಾ ದೇವಾಲಯಗಳ ಬಾಗಿಲುಗಳು ಮುಚ್ಚಿದ್ದಾಗಲೂ, ಜನರ ಹೃದಯದಲ್ಲಿದ್ದ ಇಷ್ಟಲಿಂಗವೇ ತೆರೆದಿತ್ತು. ಬಸವಣ್ಣನವರ ದಾರಿ ಅದು ರಾಜ ಮತ್ತು ಸತ್ಯದ ಮಾರ್ಗವಾಗಿತ್ತು. ಸಮಾನ ಸಮಾಜವನ್ನು, ಸಮಾನತೆಯನ್ನು ಸ್ಥಾಪಿಸುವುದು ಬಸವಣ್ಣನವರ ಉದ್ದೇಶವಾಗಿತ್ತು. ಮನುಷ್ಯರೆಲ್ಲರೂ ಒಂದೇ ಎಂಬುದರ ಸಂದೇಶ ಕೊಡಬೇಕಾಗಿತ್ತು. ಅದರಿಂದಲೇ ಜಾತಿ ಜಾತಿ ನಡುವೆ ಸಾಮರಸ್ಯ ಸಾಧಿಸಲು ಮುಂದಾದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಸ್ವಾಮೀಜಿಗಳಿಗೆ ತತ್ವ ಸಂಬಂಧಿ ಹಲವಾರು ಪ್ರಶ್ನೆಗಳನ್ನು ಕೇಳಿದರು. ಇಂದಿನ ಯುಗದಲ್ಲಿ ಬಸವಣ್ಣನವರ ಸಂದೇಶ ಹೇಗೆ ಪ್ರಸ್ತುತ? ಜಾತಿ ಭೇದ ನಿವಾರಣೆಗೆ ಏನು ಮಾಡಬೇಕು? ಎಂಬಂತಹ ಪ್ರಶ್ನೆಗಳಿಗೆ ಸ್ವಾಮೀಜಿಗಳು ತಾಳ್ಮೆಯಿಂದ ಉತ್ತರಿಸಿ, ಸತ್ಯ ಮತ್ತು ಧರ್ಮದ ಮಾರ್ಗವೇ ಸಮಾಜಕ್ಕೆ ಬೆಳಕು ಎಂದು ತಿಳಿಸಿದರು.

ಬಸವ ಪುತ್ಥಳಿಗೆ ಚಿಂತನೆ:

ಶಾಸಕ ಸಿ.ಎನ್. ಬಾಲಕೃಷ್ಣ ಅವರು ಮಾತನಾಡಿ, ಅನುಭವ ಮಂಟಪವನ್ನು 12ನೇ ಶತಮಾನದಲ್ಲಿ ದಯಪಾಲಿಸಿದವರು ಬಸವಣ್ಣ. ಶ್ರೀ ಬಸವೇಶ್ವರರ ಪುತ್ಥಳಿಯನ್ನು ಹಾಸನದಲ್ಲಿ ಕೂಡ ನಿರ್ಮಾಣ ಮಾಡಲು ಶಾಸಕ ಎಚ್.ಪಿ. ಸ್ವರೂಪ್ ಕೂಡ ಚಿಂತನೆ ಮಾಡಿದ್ದು, ಮುಂದಿನ ದಿನಗಳಲ್ಲಿ ಚನ್ನರಾಯಪಟ್ಟಣದಲ್ಲೂ ಕೂಡ ಪ್ರತಿಮೆ ನಿಮಾಣ ಮಾಡಲು ಮುಂದಾಗಿ ಅನಾವರಣ ಮಾಡಲಾಗುವುದು. ರಾಜ್ಯದ ವಿವಿಧ ಜಿಲ್ಲೆಗಳಿಂದ ಸ್ವಾಮೀಜಿಗಳು ಈ ಕಾರ್ಯಕ್ರಮಕ್ಕೆ ಆಗಮಿಸಿರುವುದು ಶಕ್ತಿ ಬಂದಂತಾಗಿದೆ. ಮಹಾಲಯ ಅಮಾವಾಸ್ಯೆ ವಿಶೇಷ ದಿನದಂದು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ಶಾಸಕ ಹೆಚ್.ಪಿ.ಸ್ವರೂಪ್, ಸಾಣೇನಹಳ್ಳಿ ತರಳಬಾಳು ಜಗದ್ಗುರು ಶಾಖಾ ಮಠದ ಪಂಡಿತಾರಾಧ್ಯ ಸ್ವಾಮೀಜಿ, ಬಾಲ್ಕಿ ಹಿರೇಮಠದ ಶ್ರೀ ಬಸವಲಿಂಗ ಪಟ್ಟದೇವರು ಸ್ವಾಮೀಜಿ, ಗುರು ಬಸವ ಸ್ವಾಮೀಜಿ, ಶಿವಾನಂದ ಸ್ವಾಮೀಜಿ, ಜ್ಞಾನಪ್ರಭು ಸಿದ್ದರಾಮ ದೇಶಿ ಕೇಂದ್ರ ಸ್ವಾಮೀಜಿ, ಶ್ರೀ ಗಂಗಾಮಾತಾದೇವಿ, ಶ್ರೀ ರುದ್ರಮುನಿ ಸ್ವಾಮೀಜಿ, ಶ್ರೀ ಸಂಗಮೇಶ್ವರ ಸ್ವಾಮೀಜಿ, ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಶ್ರೀ ಜಯ ಚಂದ್ರಶೇಖರ ಸ್ವಾಮೀಜಿ ಇದ್ದರು.

### ಸ್ವಾಮೀಜಿ ಭಾಷಣಕ್ಕೆ ಅಡ್ಡಿ

ಸಂಜೆ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಸಾಣೇನಹಳ್ಳಿ ತರಳಬಾಳು ಮಠದ ಪಂಡಿತಾರಾಧ್ಯ ಸ್ವಾಮೀಜಿ ಅವರ ಭಾಷಣಕ್ಕೆ ಲಿಂಗಾಯತ ಮುಖಂಡರು ಅಡ್ಡಿಪಡಿಸಿದ ಘಟನೆಯೂ ನಡೆಯಿತು. ಭಾಷಣದ ಮಧ್ಯೆ ಸ್ವಾಮೀಜಿ ಅವರು ರಾಜ್ಯಾದ್ಯಂತ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಸಮಾಜದವರು ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದೇ ಬರೆಸಬೇಕು. ನಾವು ವೀರೈಶವರಲ್ಲ ಎಂದು ಪ್ರತಿಪಾದಿಸಿದರು.
ಅದಕ್ಕೆ ಕೆಲವರು ಆಕ್ಷೇಪ ವ್ಯಕ್ತಪಡಿಸಿ ವೇದಿಕೆ ಹತ್ತಲು ಯತ್ನಿಸಿದರು. ಮಧ್ಯಪ್ರವೇಶಿಸಿದ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಪರಿಸ್ಥಿತಿ ತಿಳಿಗೊಳಿಸಿದರು. ಘಟನೆಯಿಂದ ಮುಜುಗರಕ್ಕೀಡಾದ ಸ್ವಾಮೀಜಿ ತಮ್ಮ ಭಾಷಣ ಸ್ಥಗಿತಗೊಳಿಸಿ ಅಲ್ಲಿಂದ ನಿರ್ಗಮಿಸಿದರು.

# ಬೆಟ್ಟಹಳ್ಳಿ ಗ್ರಾಮಕ್ಕೆ ನೂತನ ಬಸ್

## ಶಾಸಕ ಸಿಮೆಂಟ್ ಮಂಜು ಚಾಲನೆ



• ಪ್ರಜೋದಯ ವರದಿ

**ಆಲೂರು:** ಸಿಂಧುವಳ್ಳಿ- ಬೆಟ್ಟಹಳ್ಳಿ ಗ್ರಾಮಸ್ಥರ ಬಹುದಿನ ಬೇಡಿಕೆಯಾದ ಸಾರಿಗೆ ಬಸ್ ಸೌಕರ್ಯಕ್ಕೆ ಶಾಸಕ ಸಿಮೆಂಟ್ ಮಂಜು ಸೋಮವಾರ ಚಾಲನೆ ನೀಡಿದರು.

ನೂತನವಾಗಿ ನಿರ್ಮಾಣಗೊಂಡ ಬಸ್ಸು ನಿಲ್ದಾಣ ಮತ್ತು ಗ್ರಾಮಕ್ಕೆ ನೂತನವಾಗಿ ಆಗಮಿಸಿದ ನೂತನ ಮಾರ್ಗದ ಬಸ್ಸಿಗೆ ಚಾಲನೆ ನೀಡಿ ಮಾತನಾಡಿ, ಈ ಮಾರ್ಗದಲ್ಲಿ ಬಸ್ಸಿನ ಸೌಕರ್ಯವಿಲ್ಲದೆ ಆಸ್ಪತ್ರೆ, ಕಚೇರಿ ಇನ್ನಿತರೆ ಕೆಲಸಗಳಿಗೆ ಹೋಗಿ ಬರಲು ವಿದ್ಯಾರ್ಥಿಗಳು, ಮಹಿಳೆಯರು ಮತ್ತು ವೃದ್ಧರಿಗೆ ತೀವ್ರ ತೊಂದರೆಯಾಗಿದೆ ಎಂದು ಸುತ್ತಮುತ್ತಲಿನ ಗ್ರಾಮಸ್ಥರು ಹಲವು ದಿನಗಳಿಂದ ಬೇಡಿಕೆ ಇಟ್ಟಿದ್ದರು.

ನೂತನವಾಗಿ ಈ ಮಾರ್ಗದಲ್ಲಿ ಓಡಾಡುವ ಬಸ್ಸು ತಿಪ್ಪಾಪುರ, ದೈತಾಪುರ, ಬೆಕ್ಕಡಿ, ದಾಟೂರು, ನಲ್ಲೂರು, ಮಾರನಾಯಕನಹಳ್ಳಿ, ಅರೆಹಳ್ಳ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅನುಕೂಲವಾಗಿದೆ.

ಈ ಗ್ರಾಮಗಳಿಗೆ ಸಾರಿಗೆ ಬಸ್ಸಿನ ಸೌಕರ್ಯವಿಲ್ಲದೆ ಗ್ರಾಮಸ್ಥರು ಸುಮಾರು ನಾಲ್ಕಾರು ಕಿ.ಮೀ. ನಡೆದು ಬಂದು ಬೆಟ್ಟಹಳ್ಳಿ ಕೂಡಿಗೆಯಲ್ಲಿ ಬಸ್ ಸೌಕರ್ಯ ಪಡೆಯಬೇಕಾಗಿತ್ತು. ಈ ಪ್ರದೇಶ ಕಾಡಾನೆ ಹಾವಳಿಗೊಳಪಟ್ಟಿರುವ ಪ್ರದೇಶವಾಗಿರುವುದರಿಂದ ವಿದ್ಯಾರ್ಥಿಗಳು, ಮಹಿಳೆಯರು ಓಡಾಡಲು ಭಯ ಭೀತರಾಗಿದ್ದರು.

ಈಗ ಸಾರಿಗೆ ಬಸ್ ಸೌಕರ್ಯ ಒದಗಿರುವುದರಿಂದ ಭಯಮುಕ್ತರಾಗಿ ಓಡಾಡಬಹುದು. ಸಾರ್ವಜನಿಕರು ಮತ್ತು ಪ್ರಯಾಣಿಕರು ಬಸ್ ಚಾಲಕ, ನಿರ್ವಾಹಕರೊಡನೆ ಉತ್ತಮ ಬಾಂಧವ್ಯದಿಂದ ವರ್ತಿಸುವ ಮೂಲಕ ಸೌಕರ್ಯ ಫಲಪ್ರದವಾಗಲೆಂದು ಶಾಶಕರು ಹಾರೈಸಿದರು.

# ಇಂದು, ನಾಳೆ ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಬೇಲೂರು ಮತ್ತು ಗೆಂಡೇಹಳ್ಳಿ 66/11 ಕೆ.ವಿಯ ವಿ.ವಿ ಕೇಂದ್ರಗಳಲ್ಲಿ ಸೆ.23 ರಂದು ತುರ್ತು ಬ್ರೇಕರ್ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ, ಸದರಿ ದಿನಾಂಕದಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯವರೆಗೆ 66/11 ಕೆ.ವಿ ಬೇಲೂರು ಮತ್ತು ಗೆಂಡೇಹಳ್ಳಿ ವಿ.ವಿ. ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸೆ.24 ರಂದು 66/11ಕೆ.ವಿ ಸಂತೆಪೇಟೆ ಹಾಸನ ವಿ.ವಿ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ ಹಾಸನ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಸಂತೆಪೇಟೆ ಸರ್ಕಲ್, ಸಿದ್ದಯ್ಯನಗರ, ಗಾಂಧಿ ಬಜಾರ್, ತಣ್ಣೀರುಹಳ್ಳ, ವಿಜಯ ನಗರ, ಕೆ.ಹೆಚ್.ಬಿ. ಶ್ರೀನಗರ, ಎನ್.ಆರ್. ವೃತ್ತ, ಹಾಸನಾಂಬ ದೇವಾಲಯ ಸುತ್ತಮುತ್ತ, ಹುಣಸಿನಕೆರೆ, ಮೈಕ್ರೊ ವೇವ್, ಬಿಟ್ಟಗೋಡನಹಳ್ಳಿ,



ಮೆಡಿಕಲ್ ಕಾಲೇಜು, ಡಿ.ಸಿ ಕಚೇರಿ, ಎಸ್.ಪಿ ಕಚೇರಿ, ಆಜಾದ್ ರೋಡ್, ವಲ್ಲಭಾಯ್ ರೋಡ್, ನಗರ ಸಭೆ ಕಾರ್ಯಾಲಯ, ಕಟ್ಟಿನಕೆರೆ ಮಾರ್ಕೆಟ್, ದೇವೆಗೌಡನಗರ, ಹನುಮಂತಪುರ, ಅಗಿಲೆ, ಎರೆಬೋರೆಕಾವಲು, ಚನ್ನಪಟ್ಟಣ, ಹೊಸಕೊಪ್ಪಲು, ದೇವಮ್ಮ ಬಡಾವಣೆ, ಮಾರ್ಗನಹಳ್ಳಿ, ಬೈಲಹಳ್ಳಿ, ಬಸವೇಶ್ವರನಗರ, ಹೊಯ್ಸಳ ರೆಸಾರ್ಟ್, ಇತರೆ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜುಗಳು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಕವಿಪ್ರನಿನಿ, ಹಾಸನ ಕಾರ್ಯಾಚರಣೆಗಳ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ತಿಳಿಸಿದ್ದಾರೆ.

# ಬ್ಯಾಂಕ್ ಅಭಿವೃದ್ಧಿಗೆ ಗ್ರಾಹಕರ- ನಿರ್ದೇಶಕರ ಸಹಕಾರ ಮುಖ್ಯ

**ಬೇಲೂರು:** ಬೇಲೂರು ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

ಬ್ಯಾಂಕ್‌ನ ನಷ್ಟದ ಪ್ರಮಾಣ ಇಳಿಕೆ ಮಾಡಿದ್ದೇನೆ. ಅಭಿವೃದ್ಧಿಗೆ ಗ್ರಾಹಕರ ಮತ್ತು ನಿರ್ದೇಶಕರ ಸಹಕಾರವೇ ಮುಖ್ಯ ಎಂದು ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಪೈಂಟ್ ರವಿ ತಿಳಿಸಿದರು.

ಪಟ್ಟಣದ ಸುಧನ್ವಗೌಡ ಕಲ್ಯಾಣ ಮಂಟಪದಲ್ಲಿ ನಡೆದ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್‌ನ ಸರ್ವ ಸದಸ್ಯರ ವಾರ್ಷಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಅರ್ಬನ್ ಕೋ ಆಪರೇಟೀವ್ ಬ್ಯಾಂಕಿಗೆ ನಾನು ಅಧ್ಯಕ್ಷನಾಗುವ ಮೊದಲು ಇದ್ದ ನಷ್ಟದ ಪ್ರಮಾಣವನ್ನು ಇಳಿಕೆ ಮಾಡಿದ್ದೇನೆ ಎಂದ ಅವರು, ನಾನು ಬ್ಯಾಂಕಿನ ಅಧ್ಯಕ್ಷನಾದ ಸಂದರ್ಭದ ಸ್ಥಿತಿ ಶೇ. 25 ರಷ್ಟು ಎನ್‌ಪಿಎ ಇತ್ತು. ಅದನ್ನು ಇದೀಗ ಶೇ.5.5 ಕ್ಕೆ ಇಳಿಕೆ ಮಾಡಿದ್ದ ಹಿನ್ನಲೆಯಲ್ಲಿ 6.5 ಲಕ್ಷಕ್ಕೆ ಸೀಮಿತವಾಗಿದ್ದ ಸಾಲದ ಮಿತಿ ಇಂದು 12 ಲಕ್ಷದ 14 ಸಾವಿರಕ್ಕೆ ಏರಿಕೆಯಾಗಿದೆ. ಸಾಲ ವಸೂಲಾತಿ ಪ್ರಮಾಣ ಏರಿಕೆ ಮಾಡಿಸಿದ್ದೇನೆ. ಸಾಲ ವಸೂಲಾತಿ ಇನ್ನಷ್ಟು ಬಿಗಿಗೊಳಿಸಿ ನಷ್ಟದ ಪ್ರಮಾಣ ಇಳಿಸುವುದರ ಜೊತೆಗೆ ಎನ್‌ಪಿಎ ಹೋಗಲಾಡಿಸುವ ಮೂಲಕ ಬ್ಯಾಂಕಿನ ಅಭಿವೃದ್ಧಿಗೆ ಮುಂದಾಗುತ್ತೇನೆ ಎಂದರು.



ಬಾಡಿಗೆ ಕಟ್ಟಡದಲ್ಲಿರುವ ನಮ್ಮ ಬ್ಯಾಂಕಿಗೆ ಒಂದು ನಿವೇಶನ ಪಡೆಯಲು ಯೋಚಿಸಲಾಗಿದ್ದು, ಅತಿ ಶೀಘ್ರದಲ್ಲೆ ಎಟಿಎಂ ಕಾರ್ಡ್ ವಿತರಿಸಲಾಗುತ್ತದೆ. ಇದಕ್ಕೆ ನಿರ್ದೇಶಕರ ಹಾಗೂ ಗ್ರಾಹಕರ ಸಹಕಾರ ಅತಿಮುಖ್ಯವಾಗಿದೆ ಎಂದು ತಿಳಿಸಿದರು.

ನಿರ್ದೇಶಕ ಎಸ್.ಕೆ.ನಾಗೇಶ್ ಮಾತನಾಡಿ, ಹಿರಿಯರು ಕಟ್ಟಿದ ಬ್ಯಾಂಕ್ ಅನ್ನು ಅಭಿವೃದ್ಧಿ ಪಡಿಸಬೇಕಿದೆ ಎಂದು ಮನವಿ ಮಾಡಿದರು.

ಷೇರುದಾರ ವೆಂಕಟೇಶ್, ನಷ್ಟದಲ್ಲೇ ಬ್ಯಾಂಕ್ ಮುಂದುವರಿದರೆ ಬ್ಯಾಂಕಿನ ಸ್ಥಿತಿ ಗತಿಯೇನು ಎಂದು ಪ್ರಶ್ನಿಸಿದರಲ್ಲದೆ, ಷೇರುದಾರ ಪರಮೇಶ್, ವಾರ್ಷಿಕ ವರದಿ ಸಭಾ ಪುಸ್ತಕದಲ್ಲಿ ಕೆಲ ನೌಕರರ ಹೆಸರು ಹಾಕದಿರುವುದಕ್ಕೆ ಹಾಗೂ ಡೆವಿಂಡೆಟ್ ಕೊಡದಿರುವುದಕ್ಕೆ ಆಕ್ಷೇಪಿಸಿದರು.

ವ್ಯವಸ್ಥಾಪಕ ಶಿವಶಂಕರ್, ಅಕೌಂಟೆಂಟ್ ಮಂಜುಳ, ಹಿರಿಯ ಸಹಾಯಕ ಕೆ.ಎಸ್.ರಮೇಶ್, ಅಣ್ಣೇಗೌಡ, ವೆಂಕಟೇಶ್, ಪರಮೇಶ್ ಮಾತನಾಡಿದರು. ಬ್ಯಾಂಕ್ ಉಪಾಧ್ಯಕ್ಷ ಬಿ.ವಿ.ಸತೀಶ್, ನಿರ್ದೇಶಕರಾದ ಬಿ.ಎನ್.ಚಂದ್ರಶೇಖರ್, ಬಿ.ಎಂ. ಪ್ರಸನ್ನ, ಕೆ.ವಿ.ಬಲರಾಮೇಗೌಡ, ಎಂ.ಪಿ.ತಾರಾನಾಥ್ ಇದ್ದರು.

# ವಾರ್ಷಿಕ ಮಹಾಸಭೆ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ ಆಲೂರು, ಇದರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸೆ. 24 ರಂದು ಸಂಘದ ಕಚೇರಿ ಆವರಣದಲ್ಲಿ ಬೆಳಗ್ಗೆ 11.30ಕ್ಕೆ ನಡೆಯಲಿದೆ.

ಸಂಘದ ಅಧ್ಯಕ್ಷರು ಹಾಗೂ ಜಿಲ್ಲಾ ಸಹಕಾರ ಕಏಂದ್ರ ಬ್ಯಾಂಕ್ ನಿ. ಹಾಸನ ನಿರ್ದೇಶಕ ಜಗದೀಶ್ ಕಬ್ಬಿನಹಳ್ಳಿ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಸಹಕಾರ ಸಂಘಗಳ ಉಪನಿಬಂಧಕ ಕೆ.ಕೆ.ಕಿರಣ್‌ಕುಮಾರ್, ಸಹಕಾರ ಸಂಘಗಳ ಸಹಾಯಕ ನಿಬಂಧಕ ಖಾಲಿದ್‌ಅಹಮದ್, ಸಿಡಿಒ ಎಂ. ಸಿ. ಶಕು ಭಾಗವಹಿಸಲಿದ್ದಾರೆ ಎಂದು ಪ್ರಭಾರ ಕಾರ್ಯದರ್ಶಿ ಎಂ. ಬಿ. ಉಮೇಶ್ ತಿಳಿಸಿದ್ದಾರೆ

# ಜಿಲ್ಲೆಯಲ್ಲಿ 3 ದಿನ ಮಳೆ

ಬೆಂಗಳೂರು: ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸೆ. 27, 28, 29 ಕ್ಕೆ ಮಳೆ ಚುರುಕು ಪಡೆಯಲಿದ್ದು ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ.

# ವೈಜ್ಞಾನಿಕ ವಿಧಾನದಲ್ಲಿ ಆಲೂ ಬೆಳೆಯಲು ಮಾಹಿತಿ



• ಪ್ರಜೋದಯ ವರದಿ

**ಹಾಸನ:** ಕಾರೆಕೆರೆ ಕೃಷಿ ಮಹಾ ವಿದ್ಯಾಲಯದ ಅಂತಿಮ ವರ್ಷದ ಕೃಷಿ ಮತ್ತು ಆಹಾರ ತಂತ್ರಜ್ಞಾನ ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ಕೆ.ಬ್ಯಾಡರಹಳ್ಳಿ ಗ್ರಾಮದ ರೈತರಿಗೆ ಆಲೂಗಡ್ಡೆ ಬೆಳೆ ಬಗ್ಗೆ ಮಾಹಿತಿ ನೀಡಿದರು.

ವಿದ್ಯಾರ್ಥಿಗಳಾದ ಕೃತಿ, ತೇಜಸ್ವಿನಿ, ಮುತ್ತಣ್ಣ, ಸಂದೀಪ ಮತ್ತು ಜಯಸಿಂಹ ಮಾತನಾಡಿ, ಗ್ರಾಮದಲ್ಲಿ ಆಲೂಗಡ್ಡೆ ಪ್ರಮುಖ ಬೆಳೆಯಾಗಿರುವುದರಿಂದ ಅದರ ವೈಜ್ಞಾನಿಕ ಬೆಳೆ ವಿಧಾನಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ತಿಳಿಸಿದ ಅವರು, ರೈತರಿಗೆ ಭೂಮಿ ಸಿದ್ಧತೆ, ಬೀಜದ ಆಯ್ಕೆ ಮತ್ತು ಬೀಜೋಪಚಾರ, ಬಿತ್ತನೆ ವಿಧಾನ, ಕಟಾವು ತಂತ್ರ, ಸಮಗ್ರ ರೋಗ ನಿರ್ವಹಣೆ, ಸಮಗ್ರ ಕೀಟ ನಿರ್ವಹಣೆ, ಆಲೂಗಡ್ಡೆ ಆಧಾರಿತ ಆಹಾರ ಉಪ ಉತ್ಪನ್ನಗಳು ಹಾಗೂ ಸಂಗ್ರಹಣೆ ವಿಧಾನಗಳು ಕುರಿತಾದ ಮಾಹಿತಿ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಮಧುಸೂದನ, ಡಾ.ತೋಟಜೋಸೆಫ್ ರಾಜು, ಡಾ.ಸಹನ ಅವರು ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಿದರು.

# ಇಂದು ರಾಷ್ಟ್ರೀಯ ಆಯುರ್ವೇದ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಆಯುಷ್ ಸಭಾಂಗಣದಲ್ಲಿ ಸೆ.23 ರಂದು ಬೆಳಿಗ್ಗೆ 11 ಗಂಟೆಗೆ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್, ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರುಗಳಾದ ಹೆಚ್.ಡಿ.ರೇವಣ್ಣ, ಡಾ.ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ.ಮಾದೇಗೌಡ, ಕೆ. ವಿವೇಕಾನಂದ, ಡಾ|| ಸೂರಜ್ ರೇವಣ್ಣ ಹಾಗೂ ಮಹಾನಗರ ಪಾಲಿಕೆಯ ಮೇಯರ್ ಗಿರೀಶ್ ಚನ್ನವೀರಪ್ಪ ಅವರು ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ.

# ಜಿಎಸ್‌ಟಿ: ಗಮನಾರ್ಹ ಪರಿಣಾಮ

• ಪ್ರಜೋದಯ ವರದಿ

ಗುವಾಹಟಿ: ಪ್ರಧಾನಿ ನರೇಂದ್ರ ಮೋದಿ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳನ್ನು ಶ್ಲಾಘಿಸಿದ್ದು, ಇದರ ಪ್ರಯೋಜನಗಳು ಜನರ ಜೀವನದ ಮೇಲೆ ಗಮನಾರ್ಹ ಪರಿಣಾಮ ಬೀರುತ್ತವೆ ಎಂದು ಹೇಳಿದ್ದಾರೆ.

ಸೋಮವಾರ ಅರುಣಾಚಲ ಪ್ರದೇಶದ ರಾಜಧಾನಿ ಇಟಾನಗರದಲ್ಲಿ 5,100 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಪ್ರಧಾನಿ ಮೋದಿ, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಈಶಾನ್ಯ ರಾಜ್ಯಗಳನ್ನು ನಿರ್ಲಕ್ಷಿಸಿದೆ ಎಂದು ಆರೋಪಿಸಿದರು.

ಜಿಎಸ್‌ಟಿ ಕಡಿತ ಮಾಡಿರುವುದರಿಂದ ಅಡುಗೆ ಸಾಮಗ್ರಿ, ಮಕ್ಕಳಿಗೆ ಶೈಕ್ಷಣಿಕ ಸಾಮಗ್ರಿಗಳು, ಪಾದರಕ್ಷೆಗಳು ಮತ್ತು ಬಟ್ಟೆಗಳಂತಹ ಅಗತ್ಯ ವಸ್ತುಗಳು ಹೆಚ್ಚು ಕೈಗೆಟುಕುವಂತಾಗಿವೆ. ಇದರಿಂದ ಕುಟುಂಬಗಳು ಈಗ ತಮ್ಮ ಮಾಸಿಕ ಬಜೆಟ್‌ನಲ್ಲಿ ಗಣನೀಯ ಉಳಿತಾಯ ಮಾಡಲಿವೆ ಎಂದು ಹೇಳಿದರು.

# ಗ್ಯಾರಂಟಿ ಯೋಜನೆ ಫಲಾನುಭವಿಗಳಿಗೆ ತಲುಪಲು ಕ್ರಮ ವಹಿಸಿ

## ಜನರ ಬೆನ್ನೆಲುಬಾಗಿ ಕೆಲಸ ಮಾಡುತ್ತಿರುವ ರಾಜ್ಯ ಸರ್ಕಾರ: ಪೃಥ್ವಿ ಜಯರಾಮ್

• ಪ್ರಜೋದಯ ವರದಿ

**ಆಲೂರು:** ಪಂಚ ಗ್ಯಾರಂಟಿ ಯೋಜನೆ ತಲುಪದಿರುವ ಕುಟುಂಬಗಳನ್ನು ಅಧಿಕಾರಿಗಳು ಗುರುತಿಸಿ ಕ್ರಮ ವಹಿಸುವಂತೆ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಪೃಥ್ವಿ ಜಯರಾಮ್ ಅವರು ತಿಳಿಸಿದರು.

ಪಾಳ್ಯ ಗ್ರಾಮ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಹೋಬಳಿ ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿ, ಬಡವರ, ದೀನ ದಲಿತರ ರಕ್ಷಣೆ ಮತ್ತು ಬಡತನ ಹಸಿವು ನಿವಾರಣೆ ಮಾಡುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೆ ಪಂಚ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಗ್ಯಾರಂಟಿ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಹೊರೆ ಬೀಳದೆ ಹಣಕಾಸು ವ್ಯವಸ್ಥೆಯಲ್ಲಿ ಬದಲಾವಣೆ ತರುವ ಮೂಲಕ ರಾಜ್ಯ ಸರ್ಕಾರ ಜನತೆಯ



ಬೆನ್ನೆಲುಬಾಗಿ ಕೆಲಸ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಹೋಬಳಿ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಶಿಬಿರಗಳನ್ನು ನಡೆಸಲಾಗುವುದು ಎಂದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸುಬ್ರಹ್ಮಣ್ಯ ಶರ್ಮ ಅವರು ಮಾತನಾಡಿ, ತಾಲ್ಲೂಕಿನ ಗಂಜಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 70 ಅಲೆಮಾರಿ ಹಾಗೂ ಮೀನುಗಾರರ ಕುಟುಂಬ ವಾಸಿಸುತ್ತಿವೆ. ಅವರಿಗೆ ನಿಯಮನುಸಾರ ಪಡಿತರ ವಿತರಿಸಬೇಕು. ತಾಲ್ಲೂಕಿನಲ್ಲಿ ಯುವ ನಿಧಿ ಯೋಜನೆಗೆ ಸಂಬಂಧಿಸಿದಂತೆ ಕಾಲೇಜುಗಳಲ್ಲಿ ಹೆಚ್ಚಿನ ಅರಿವು ಕಾರ್ಯಕ್ರಮವನ್ನು ಮಾಡಲಾಗುವುದು ಎಂದರು.

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಅಧಿಕಾರಿ ವಿಜಯಲಕ್ಷ್ಮಿ ಮಾತನಾಡಿ, ತಾಲ್ಲೂಕಿನಲ್ಲಿ ಒಟ್ಟು 340 ಫಲಾನುಭವಿಗಳು ಯುವನಿಧಿ ಯೋಜನೆಯಲ್ಲಿ ನೋಂದಾವಣೆಯಾಗಿದ್ದು, 271 ಫಲಾನುಭವಿಗಳು ಯೋಜನೆ ಲಾಭವನ್ನು ಪಡೆದಿದ್ದಾರೆ ಎಂದು ತಿಳಿಸಿದರು.

ತಾಲ್ಲೂಕು ಆಹಾರ ನಿರೀಕ್ಷಕ ಮೋಹನ್ ಅವರು ಮಾತನಾಡಿ, ಅನ್ನಭಾಗ್ಯ ಯೋಜನೆಯಲ್ಲಿ ತಾಲ್ಲೂಕಿನ 23,400 ಕುಟುಂಬಗಳ 75,000 ಫಲಾನುಭವಿಗಳು ಯೋಜನೆಯ ಲಾಭವನ್ನು ಪಡೆಯುತ್ತಿದ್ದಾರೆ ಎಂದು ಅವರು ಹೇಳಿದರು.

ಗೃಹಜ್ಯೋತಿ ಯೋಜನೆ ಅಡಿ ಆಗಸ್ಟ್ ತಿಂಗಳಲ್ಲಿ ತಾಲ್ಲೂಕಿನಲ್ಲಿ 24,636 ಮನೆಗಳಿಗೆ ಒಟ್ಟು 93 ಲಕ್ಷ ರೂ.ಗಳನ್ನು ವಿನಿಯೋಗಿಸಲಾಗಿದೆ ಎಂದು ಇಲಾಖಾಧಿಕಾರಿ ಶಶಿ ಕುಮಾರ್ ತಿಳಿಸಿದರು. ಸುಬ್ರಹ್ಮಣ್ಯ ಶರ್ಮ, ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

ತಾಲ್ಲೂಕಿನಲ್ಲಿ ಒಟ್ಟು 22 ಸಾವಿರ ಅರ್ಹ ಫಲಾನುಭವಿಗಳಿಗೆ ಜೂನ್ ತಿಂಗಳವರೆಗೂ ಡಿಬಿಟಿ ಮುಖಾಂತರ ಹಣ ಪಾವತಿಯಾಗಿದೆ. ಶೀಘ್ರದಲ್ಲೇ ಸರ್ಕಾರ ಉಳಿದ ತಿಂಗಳ ಗೃಹಲಕ್ಷ್ಮಿ ಯೋಜನೆ, ಹಣ ಬಿಡುಗಡೆ ಮಾಡಲಿದೆ ಎಂದು ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿ ತಿಳಿಸಿದರು.

ಸಭೆಯಲ್ಲಿ ಗ್ಯಾರಂಟಿ ಸಮಿತಿ ಸದಸ್ಯರಾದ ಯೋಗೀಶ್ ಭರತವಳ್ಳಿ, ಶ್ರೀಧರ್ ಹಳೆ ಆಲೂರು, ಮಧು ಅಬ್ಬನ, ರುದ್ರಕುಮಾರ್, ಅಶೋಕ್, ಪಾಳ್ಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದರ್ಶನ್ ಅವರು ಹಾಜರಿದ್ದರು.




ಆಲೂರು: ಮರಸು ಹೊಸಳ್ಳಿ ಗ್ರಾಮದಲ್ಲಿರುವ ಐತಿಹಾಸಿಕ ವಿಜಯದುರ್ಗ ಕ್ಷೇತ್ರದಲ್ಲಿ, ಶರನವರಾತ್ರಿ ಅಂಗವಾಗಿ ಉಡುಸಲಮ್ಮ ಮತ್ತು ಮತ್ಸಲಮ್ಮ ದೇವಿಯರಿಗೆ ವಿಶೇಷ ಅಲಂಕಾರ ಮಾಡಿ ಒಂಭತ್ತು ದಿನಗಳು ನಡೆಯಲಿರುವ ಉತ್ಸವಕ್ಕೆ ಚಾಲನೆ ನೀಡಲಾಯಿತು.



ಚನ್ನರಾಯಪಟ್ಟಣ: ತಾಲ್ಲೂಕಿನ ಕುಂದೂರು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ಶರನ್ನವರಾತ್ರಿ ವಿಶೇಷ ಮೊದಲ ದಿನದ ಅಂಗವಾಗಿ ಶ್ರೀ ಮೆಳೆಯಮ್ಮ ದೇವಿಗೆ ನಿಂಬೆಹಣ್ಣಿನ ಅಲಂಕಾರದ ಪೂಜಾ ಕೈಂಕರ್ಯಗಳನ್ನು ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ನೇರವೇರಿಸಿದರು.

# ಮಲ್ಲೇಶ್ ಕ್ಯಾಮನಹಳ್ಳಿ ಗ್ರಾ.ಪಂ. ಅಧ್ಯಕ್ಷ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಕ್ಯಾಮನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಮಲ್ಲೇಶ್ ಅವರು ಆಯ್ಕೆಯಾಗಿದ್ದಾರೆ.

ಒಟ್ಟು 13 ಸದಸ್ಯರ ಬಲ ಹೊಂದಿರುವ ಪಂಚಾಯತಿಯಲ್ಲಿ, ಈ ಹಿಂದಿನ ಅಧ್ಯಕ್ಷರಾದ ಸಚ್ಚಿನ್ ಅವರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಚುನಾವಣೆ ನಡೆಯಿತು. ನಡೆದ ಚುನಾವಣೆಯಲ್ಲಿ ಮಲ್ಲೇಶ್ ಒಟ್ಟು 7 ಮತಗಳನ್ನು ಪಡೆದು ಜಯ ಸಾಧಿಸಿದರು. ಎದುರಾಳಿ ಆಕಾಶ್ 5 ಮತಗಳನ್ನು ಪಡೆದರೆ, ಒಬ್ಬ ಸದಸ್ಯ ಗೈರು ಹಾಜರಿದ್ದರು.

ಚುನಾವಣೆ ಅಧಿಕಾರಿಯಾಗಿ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಹಣಾಧಿಕಾರಿ ಗಂಗಾಧರ್ ಕಾರ್ಯ ನಿರ್ವಹಿಸಿದರು.

## ಹಾಸನ ದಸರಾ ಕವಿಗೋಷ್ಠಿ | ಸಾಹಿತಿಗಳು ವೈಚಾರಿಕ- ವೈಜ್ಞಾನಿಕ ದೃಷ್ಟಿಕೋನದಲ್ಲಿ ಸಾಹಿತ್ಯ ರಚಿಸಿ

# ವಿಶ್ವಮಾನವ ತತ್ವ ಸಾರುವ ಕುವೆಂಪು ಎಲ್ಲರಿಗೂ ಮಾದರಿ

• ಪ್ರಜೋದಯ ವರದಿ

**ಹಾಸನ:** ಧರ್ಮಾಂಧತೆಯ ಮಡುವಿನಲ್ಲಿ ನಲುಗುತ್ತಿರುವ ಜನತೆಗೆ ಕುವೆಂಪುರವರ ಚಿಂತನೆಗಳು ದಾರಿದೀಪವಾಗಿವೆ. ಇಂದಿನ ತಲೆಮಾರು ಕುವೆಂಪುರವರನ್ನು ಓದಿಕೊಳ್ಳುವ ಜರೂರಿದೆ ಎಂದು ಹಿರಿಯ ಸಾಹಿತಿ ಪ್ರೊ. ಸೈಯದ್ ಶಹಬುದ್ದೀನ್ ಅವರು ಅಭಿಪ್ರಾಯಪಟ್ಟರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ (ರಿ.), ಬೆಂಗಳೂರು, ತಾಲ್ಲೂಕು ಘಟಕ ಹಾಸನ ಹಾಗೂ ಭಾರತ್ ಸ್ಕೌಟ್ಸ್ ಗೈಡ್ಸ್ ಜಿಲ್ಲಾ ಸಂಸ್ಥೆ ಹಾಸನ ವತಿಯಿಂದ ನಗರದ ಸ್ಕೌಟ್ಸ್ ಗೈಡ್ಸ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಹಾಸನ ದಸರಾ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಏಳೆಂಟು ವರ್ಷಗಳ ಹಿಂದೆ ಪ್ರಾರಂಭವಾದ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಹಾಸನದಿಂದ ಪ್ರಾರಂಭವಾಗಿ ಪ್ರಸ್ತುತ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಗುಣಾತ್ಮಕ ಕಾರ್ಯಕ್ರಮಗಳನ್ನು ಮಾಡುತ್ತಾ ಎಲೆಮರೆ ಕಾಯಿಯಂತಹ ಸಾಧಕರನ್ನು ಗುರುತಿಸಿ ಮುನ್ನೆಲೆಗೆ ತರುವ ಕಾರ್ಯವನ್ನು ಮಾಡುತ್ತಾ ಬಂದಿದೆ. ಸಾಹಿತಿಗಳು ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಕೋನದಲ್ಲಿ ಸಾಹಿತ್ಯ ರಚಿಸಬೇಕು ಎಂದರು.



ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿ, ರಂಜಾನ್ ದರ್ಗಾ ಹೇಳುವಂತೆ ''ಬಂದೂಕಿನ ಬಾಯಲ್ಲಿ ಗುಬ್ಬಿ ಗೂಡು ಕಟ್ಟಬೇಕಿದೆ..'' ಎಂಬ ಸದಾಶಯ ಉಳಿಯಬೇಕಾದರೆ ಜಗತ್ತು ಜಾತಿ ಧರ್ಮದೆಲ್ಲೆಗಳ ಮೀರಿ ಮಾನವೀಯ ಮೌಲ್ಯಗಳಲ್ಲಿ ಸಾಗಬೇಕಿದೆ. ಕಾವ್ಯಕ್ಕೆ ನಿರ್ದಿಷ್ಟ ವ್ಯಖ್ಯಾನವಿಲ್ಲ ದಿದ್ದರೂ ತನ್ನದೇಯಾದ ಧ್ವನಿ, ಪ್ರತಿಮೆ, ಅಲಂಕಾರ, ಛಂದಸ್ಸು, ಪ್ರಾಸ, ಲಯ, ಗೇಯತೆಗಳಿದ್ದರೆ ಪ್ರಭೆ ಹೆಚ್ಚಾಗುತ್ತದೆ. ಕವಿಯಾದವನಿಗೆ ಪದ ಜಿಪುಣತನ ವಿರಬೇಕು. ಕಾವ್ಯ ತಳ ಸಮುದಾಯದ ತಲ್ಲಣಗಳಿಗೆ ಸ್ಪಂದಿಸುವುದರ ಜೊತೆಗೆ ದಮನಿತ ರಿಗೆ, ಶೋಷಿತರಿಗೆ ದನಿಯಾಗಬೇಕು. ಕವಿಯಾದವ ಅಧ್ಯಯನ ಹಾಗೂ ಅಧ್ಯಾಪನಶೀಲರಾಗಿರಬೇಕು. ಪ್ರತಿಯೊಬ್ಬ ಬರಹಗಾರನಿಗೂ ಸಾಹಿತ್ಯ ಪರಂಪರೆಯ ಅರಿವಿರಬೇಕು. ಬಸವಾದಿ ಶಿವಶರಣರಂತೆ ಅನುಭಾವದ, ವೈಚಾರಿಕ ಸಾಹಿತ್ಯದ ಅಗತ್ಯವಿದೆ. ನಾವೆಲ್ಲಾ ಈ ದಿಸೆಯಲ್ಲಿ ಯೋಚಿಸಿ ಸಾಹಿತ್ಯ ಸೃಜಿಸಬೇಕಿದೆ ಎಂದರು.

ಭಾರತ್ ಸ್ಕೌಟ್ಸ್ ಗೈಡ್ಸ್ ಹಾಸನ ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ ಮಾತನಾಡಿ, ಯಾವುದೇ ಸಂಸ್ಥೆಯು ಅಭಿವೃದ್ಧಿ ಪಥದತ್ತ ಸಾಗಲು ವ್ಯಕ್ತಿ ಆಧಾರಿತವಾಗಿರದೇ ವ್ಯವಸ್ಥೆ ಆಧಾರಿತವಾಗಿದ್ದರೆ ಅದು ಸದಾ ಕಾಲ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತದೆ ಹಾಗೆಯೇ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಯಾವುದೇ ವೇದಿಕೆ ಅಥವಾ ಪರಿಷತ್ತಿಗೆ ಪರ್ಯಾಯವಾಗಿ ಎಂದು ಪರಿಗಣಿಸದೇ ಎಲ್ಲರನ್ನೂ ಒಗ್ಗೂಡಿಸಿಕೊಂಡು ಕನ್ನಡ ಸಾಹಿತ್ಯದ ಮೆರಗನ್ನು ಹೆಚ್ಚಿಸುವಲ್ಲಿ, ಹೊರರಾಜ್ಯ ಹಾಗೂ ವಿದೇಶಗಳಲ್ಲೂ ಸೇವೆ ಸಲ್ಲಿಸುತ್ತಿದೆ. ಅತ್ಯಲ್ಪ ಕಾಲದಲ್ಲಿ ವೇದಿಕೆ ವ್ಯಾಪಕ ಖ್ಯಾತಿ ಹೊಂದುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಹಾಸನ ತಾಲ್ಲೂಕು ಅಧ್ಯಕ್ಷೆ ಕೆ.ಸಿ. ಗೀತಾ, ಭೀಮವಿಜಯ ಪತ್ರಿಕೆ ಸಂಪಾದಕ ನಾಗರಾಜ ಹೆತ್ತೂರು, ರಾಜ್ಯ ಜಂಟಿ ಕಾರ್ಯದರ್ಶಿ ನಾಗರಾಜ್ ದೊಡ್ಡ ಮನಿ, ರಾಜ್ಯ ಕೋಶಾಧ್ಯಕ್ಷ ಎಚ್.ಎಸ್. ಬಸವರಾಜ್, ಕವಯಿತ್ರಿ ಜಯರಮೇಶ್, ಆರ್.ಎಸ್.ರಮೇಶ್, ಎ.ಎಸ್.ಒ.ಸಿ. ಎಚ್.ಎಂ.ಪ್ರಿಯಾಕ, ಹಿರಿಯ ಸಾಹಿತಿ ಎನ್.ಶೈಲಜಾ ಹಾಸನ, ಸುಮಾ ರಮೇಶ್, ರಾಜೇಶ್ವರಿ ಹುಲ್ಲೇನಹಳ್ಳಿ, ಗೊರೂರು ಅನಂತರಾಜು, ಡಿ.ಎಂ.ಕಲ್ಪನಾ, ಪಲ್ಲವಿ ಬೇಲೂರು, ಸ್ವಾಮಿಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.


**ಪ್ರಮಾಣ ಪತ್ರ**

ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಬಾಗೂರು ಹೋಬಳಿ, ಅಣತಿ ಗ್ರಾಮ, ಮುದ್ಲಾಪುರ. ಇಲ್ಲಿ ವಾಸವಾಗಿರುವ ನಂಜಮ್ಮ ಕೋಂ ಲೇಟ್ ಶಿವಣ್ಣ ಆದ ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ, ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, ನನ್ನ ಪತಿಯಾದ ಶಿವಣ್ಣನವರು ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ಬಾಗೂರು ಹೋಬಳಿ, ಅಣತಿ ಗ್ರಾಮ ಪಂಚಾಯಿತಿಗೆ ಸೇರಿದ ಮುದ್ಲಾಪುರ ಗ್ರಾಮದ ಖಾಲಿ ನಿವೇಶನದ ಖಾತೆ ಸಂಖ್ಯೆ: 441 ರಲ್ಲಿ ಒಟ್ಟು ಅಳತೆ ಪೂ–ಪ: ತೊಂಭತ್ತೈದು ಅಡಿ, ಉ–ದ: 72 ಅಡಿ ಉಳ್ಳ ನಿವೇಶನದ ಚಕ್ಕುಬಂಧಿ: ಪೂರ್ವಕ್ಕೆ: ಲಕ್ಕೇಗೌಡರ ಜಮೀನು, ಪಶ್ಚಿಮಕ್ಕೆ: ಗಿರಗೌಡರ ಮಗ ನಂಜಪ್ಪ ನಿವೇಶನ, ಉತ್ತರಕ್ಕೆ: ಸಿದ್ದಲಿಂಗಪ್ಪ ಮತ್ತು ಜವರೇಗೌಡರ ನಿವೇಶನ, ದಕ್ಷಿಣಕ್ಕೆ: ಸರ್ಕಾರಿ ರಸ್ತೆ. ಈ ನಿವೇಶನವನ್ನು ಮರೀಗೌಡರ, ಮಕ್ಕಳಾದ ಕೃಷ್ಣಯ್ಯ, ಚಿಕ್ಕತಿಮ್ಮಯ್ಯ, ಕಲ್ಲಯ್ಯ, ಲಕ್ಷ್ಮಯ್ಯ, ಕಲ್ಲಯ್ಯ, ರೇವಣ್ಣ ಎಂಬುವರಿಂದ ನುಗ್ಗೇಹಳ್ಳಿ ನೋಂದಣಿ ಕಚೇರಿ 1ನೇ ಪುಸ್ತಕದ 839 ನೇ ಸಂಪುಟ, 45–47 ನೇ ಪುಟ, ನೋಂದಣಿ ಸಂಖ್ಯೆ: 1349/92–93 ರಲ್ಲಿ ದಿನಾಂಕ: 31–03–1992 ರಲ್ಲಿ ನನ್ನ ಪ್ರತಿ ಕ್ರಯಕ್ಕೆ ಕೊಂಡಿದ್ದು, ಪೌತಿ ವಾರಸು ಮೂಲಕ ನನಗೆ ಖಾತೆ ಬಂದಿದ್ದು, ಸದರಿ ಮೂಲ ಪ್ರತಿ ಕಳೆದು ಹೋಗಿರುತ್ತದೆ. ಮುಂದೆ ಮೂಲ ಪ್ರತಿ ಸಿಕ್ಕಿದಲ್ಲಿ ತಮ್ಮ ಬ್ಯಾಂಕಿಗೆ ಹಾಜರು ಪಡಿಸುತ್ತೇನೆ ಎಂದು ಈ ಮೂಲಕ ಧೃಢೀಕರಿಸುತ್ತೇನೆ. ಈ ಪ್ರಮಾಣ ಪತ್ರವನ್ನು ಪತ್ರಿಕೆಯಲ್ಲಿ ಪ್ರಕಟಣೆಗೆ ಸಲ್ಲಿಸುವ ಸಲುವಾಗಿ ಅವಶ್ಯಕವಾಗಿರುತ್ತದೆ. ಈ ಮೇಲೆ ಹೇಳಿರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಒಪ್ಪಿ ರುಜು ಮಾಡಿರುತ್ತೇನೆ.
ಪ್ರಮಾಣದಾದರ ಸಹಿ: ನಂಜಮ್ಮ.
ನೋಟರಿ ವಕೀಲರು: ಹೆಚ್.ಕೆ ರಮೇಶ್.
ಸ್ಥಳ: ತಿಪಟೂರು ದಿನಾಂಕ: 20–09–2025

## ಸಾಲಬಾಧೆ: ರೈತ ಆತ್ಮಹತ್ಯೆ

**ಅರಕಲಗೂಡು:** ಸಾಲಬಾಧೆ ತಾಳಲಾರದೆ ವಿಷ ಸೇವಿಸಿ ರೈತ ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲ್ಲೂಕಿನ ಗಂಗೂರು ಗ್ರಾಮದಲ್ಲಿ ಸೋಮವಾರ ನಡೆದಿದೆ.

ಗ್ರಾಮದ ಕೆಂಚಯ್ಯ (75) ಮೃತರು. ಕೃಷಿಗಾಗಿ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ 3 ಲಕ್ಷ ರೂ. ಹಾಗು ರಾಮನಾಥಪುರದ ಕೆನರಾ ಬ್ಯಾಂಕ್‌ನಲ್ಲಿ 2 ಲಕ್ಷ ರೂ. ಸಾಲ ಮಾಡಿದ್ದರೆನ್ನ ಲಾಗಿದೆ. ಸಾಲ ಮರುಪಾವತಿಸುವಂತೆ ಬ್ಯಾಂಕ್‌ಗಳಿಂದ ನೋಟೀಸ್ ನೀಡಿದ್ದರಿಂದ ಜಿಗುಪ್ಸೆ ಗೊಂಡಿದ್ದ ರೈತ ಆತ್ಮಹತ್ಯೆಗೆ ಶರಣಾಗಿದ್ದಾರೆ. ಶಾಸಕ ಎ.ಮಂಜು, ಉಪ ತಹಶೀಲ್ದಾರ್ ಸ್ವಾಮಿ ಮೃತರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಿಜೆಪಿ ಮುಖಂಡನ ಬಂಧನ-ಬಿಡುಗಡೆ



**ಚನ್ನರಾಯಪಟ್ಟಣ:** ಸಾಹಿತಿ ಬಾನು ಮುಷ್ತಾಕ್ ಅವರಿಂದ ನಾಡ ಹಬ್ಬ ಮೈಸೂರು ದಸರಾ ಉದ್ಘಾಟನೆ ವಿರೋಧಿಸಿ ಪ್ರತಿಭಟನೆ ನಡೆಸುವುದಾಗಿ ಸಾಮಾಜಿಕ ಜಾಲ ತಾಣಗಳಲ್ಲಿ ಪೋಸ್ಟ್ ಹಾಕಿದ್ದ ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ ಡಿ.ಎಂ.ರವಿ ಅವರನ್ನು ಸೋಮವಾರ ಶ್ರವಣ ಬೆಳಗೊಳ ಠಾಣೆ ಪೊಲೀಸರು ಬಂಧಿಸಿ ನಂತರ ಬಿಡುಗಡೆಗೊಳಿಸಿದರು.

ಬಾನು ಮುಷ್ತಾಕ್ ಅವರು ಭುವನೇಶ್ವರಿ ಕುರಿತು ನೀಡಿದ ಹೇಳಿಕೆ ಕನ್ನಡಕ್ಕೆ ಅಪಮಾನ ಮಾಡಿದೆ. ಹಿಂದೂ ಸಂಪ್ರದಾಯದ ಮೇಲೆ ನಂಬಿಕೆ ಇಲ್ಲದ ಅವರು ದಸರಾ ಉದ್ಘಾಟಿಸ ಬಾರದು. ಸರ್ಕಾರದ ನಿರ್ಧಾರ ಖಂಡಿಸಿ ಮೈಸೂರಿನಲ್ಲಿ ಪ್ರತಿಭಟನೆ ನಡೆಸುವುದಾಗಿ ರವಿ ಹೇಳಿಕೊಂಡಿದ್ದರು. ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದಅವರನ್ನು ಬಂಧಿಸಿ ನಂತರಬಿಡುಗಡೆ ಮಾಡಲಾಯಿತು.

# ಜಾತಿ ಗಣತಿ ತಡೆಯಾಜ್ಞೆಗೆ ಹೈಕೋರ್ಟ್ ನಕಾರ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ (ಜಾತಿ ಗಣತಿ) ಸಮೀಕ್ಷೆಗೆ ತಡೆಯಾಜ್ಞೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

ಲಿಖಿತ ವಾದಾಂಶ ಸಲ್ಲಿಕೆಗೆ ಸೂಚಿಸಿ ವಿಚಾರಣೆಯನ್ನು ಸೆ.23ರ ಮಂಗಳವಾರಕ್ಕೆ ಮುಂದೂಡಿದೆ. ಜಾತಿ ಗಣತಿಯನ್ನು ಪ್ರಶ್ನೆ ಮಾಡಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ರಾಜ್ಯ ಒಕ್ಕಲಿಗರ ಸಂಘ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಸಿಜೆ ವಿಭು ಬಖ್ರು ಮತ್ತು ನ್ಯಾ.ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ಪೀಠವು ಗಣತಿಗೆ ಮಧ್ಯಂತರ ತಡೆ ನೀಡಲು ನಿರಾಕರಿಸಿತು.

ಅರ್ಜಿದಾರ ಪರವಾಗಿ ಹಿರಿಯ ವಕೀಲರಾದ ಪ್ರಭುಲಿಂಗ ನಾವದಗಿ, ಜಯಕುಮಾರ್ ಪಾಟೀಲ್, ಅಶೋಕ್ ಹಾರನಹಳ್ಳಿ ವಾದ ಮಂಡಿಸಿದರು. ಸಂವಿಧಾನದ 342ನೇ ವಿಧಿಯ ಅಡಿ ಸರ್ಕಾರದ ಆದೇಶ ಬದಿಗೆ ಸರಿಸಬೇಕೆಂದರು.

ಈ ಸಮೀಕ್ಷೆಯು ಗಣತಿಯಲ್ಲದೇ ಬೇರೇನೂ ಇಲ್ಲ. ಇಡೀ ರಾಜ್ಯದ ಜನರನ್ನು ಸಮೀಕ್ಷೆ ಒಳಗೊಳ್ಳುತ್ತಿದೆ. ಗಣತಿಯನ್ನು ಕೇಂದ್ರ ಸರ್ಕಾರ ಮಾತ್ರ ನಡೆಸಬಹುದಾಗಿದೆ ಎಂದು ಹಿರಿಯ ವಕೀಲ ಜಯಕುಮಾರ್ ಪಾಟೀಲ್ ಪೀಠದ ಗಮನಕ್ಕೆ ತಂದರು. ಯಾವುದೇ ದತ್ತಾಂಶ ಇಲ್ಲದೇ ಈ ಕೆಲಸ ಮಾಡಲಾಗುತ್ತಿದೆ. ಇದರ ಜೊತೆ ಹೊಸ ಜಾತಿಗಳನ್ನು




ಸೃಷ್ಟಿಸಲಾಗುತ್ತಿದೆ. ಕೇಂದ್ರ ಸರ್ಕಾರ ಸಮೀಕ್ಷೆ ನಡೆಸಬಹುದು. ರಾಜ್ಯ ಸರ್ಕಾರವು ಹಿಂದುಳಿದ ವರ್ಗಕ್ಕೆ ನಿರ್ದಿಷ್ಟ ಜಾತಿ ಸೇರಿಸಲು ಅಥವಾ ಅದನ್ನು ತೆಗೆಯಲು ಅಧ್ಯಯನ ಮಾತ್ರ ನಡೆಸಬಹುದು. ಸಮೀಕ್ಷೆ ನಡೆಸುವ ಅಧಿಕಾರ ಸರ್ಕಾರಕ್ಕೆ ಇಲ್ಲ ಎಂದು ರಾಜ್ಯ ಒಕ್ಕಲಿಗರ ಸಂಘದ ಪರವಾಗಿ ಹಾಜರಿದ್ದ ಅಶೋಕ್ ಹಾರನಹಳ್ಳಿ ಪೀಠದ ಗಮನಕ್ಕೆ ತಂದರು.

**450 ಕೋಟಿ ರೂ. ಅನುದಾನ**

ಸಮೀಕ್ಷೆಗೆ 450 ಕೋಟಿ ರೂ. ಅನುದಾನ ನೀಡಲಾಗಿದೆ. ಮಾನವ ಸಂಪನ್ಮೂಲ ನಿಯೋಜಿಸಲಾಗಿದೆ. ಈಗ ಸಮೀಕ್ಷೆ ಆರಂಭವಾಗಿರುವಾಗ ಅರ್ಜಿದಾರರು ನ್ಯಾಯಾಲಯದ ಮುಂದೆ ಬಂದಿದ್ದಾರೆ. ಸರ್ಕಾರ ನಡೆಸುತ್ತಿರುವುದು ಹಿಂದುಳಿದ ವರ್ಗಗಳ ಕಾಯಿದೆ ಅಡಿ ಸಮೀಕ್ಷೆ ಮಾತ್ರ. ಗಣತಿಯಲ್ಲ. 2014 ರಲ್ಲಿಯೇ ಸಮೀಕ್ಷೆ ಆರಂಭಿಸಿ, 2016 ರಲ್ಲಿ ಸಮೀಕ್ಷೆ ಮುಗಿಸಿ, 2024 ರಲ್ಲಿ ವರದಿ ನೀಡಿತ್ತು. ಹಿಂದಿನ ದತ್ತಾಂಶವನ್ನು ಅಪ್‌ಡೇಟ್ ಮಾಡಲು ಸಮೀಕ್ಷೆ ನಡೆಸಲಾಗುತ್ತಿದೆ. ದಸರಾ ರಜೆಯಾಗಿರುವುದರಿಂದ ಸರ್ಕಾರದವು ಆಶಾ ಕಾರ್ಯಕರ್ತೆಯರು, ಶಿಕ್ಷಕರನ್ನು ಬಳಕೆ ಮಾಡಿಕೊಂಡು ದತ್ತಾಂಶ ಸಂಗ್ರಹಿಸಲು ಮುಂದಾಗಿದೆ ಎಂದು ಸರ್ಕಾರದ ಪರ ವಕೀಲ ಅಭಿಷೇಕ್ ಮನು ಸಂಘ್ವಿ ತಿಳಿಸಿದರು.

## ಎಸ್‌ಸಿ -ಕ್ರೈಸ್ತ ಜಾತಿಗಳ ಪಟ್ಟಿ ತೆಗೆಯದೆ ಕೊಳಕು ರಾಜಕಾರಣ

» **ಮೊದಲನೇ ಪುಟದಿಂದ**

ಮಾಡಿದೆ. ಒಳಮೀಸಲಾತಿ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಹೀಗಿರುವಾಗ ಸಮೀಕ್ಷೆಯಲ್ಲಿ ಕ್ರೈಸ್ತ ಜಾತಿಗಳನ್ನು ಸೇರಿಸಿಕೊಂಡು ಸಮೀಕ್ಷೆ ನಡೆಸುತ್ತಿರುವ ಸರ್ಕಾರದ ಉದ್ದೇಶವಾದರೂ ಏನೆಂದು ಪ್ರಶ್ನಿಸಿದರು.

ಅನಧಿಕೃತವಾಗಿದ್ದ ಕುರುಬ ಕ್ರೈಸ್ತ, ಒಕ್ಕಲಿಗ ಕ್ರೈಸ್ತ, ಲಿಂಗಾಯಿತ ಕ್ರೈಸ್ತ ಇತ್ಯಾದಿ ಪ್ರಬಲ ಜಾತಿಗಳನ್ನು ಪಟ್ಟಿಯಿಂದ ತೆಗೆದ ಸರ್ಕಾರ ಹೊಲೆಯ ಕ್ರೈಸ್ತ, ಮಾದಿಗ ಕ್ರೈಸ್ತ, ಬಂಜಾರ ಕ್ರೈಸ್ತ ಜಾತಿಗಳನ್ನು ಉಳಿಸಿರುವುದರ ಹಿಂದೆ ಷಡ್ಯಂತ್ರವಿದೆ. ಇಡೀ ಒಳಮೀಸಲಾತಿಯ ಹಂಚಿಕೆಯನ್ನು ದಿಕ್ಕು ತಪ್ಪಿಸಲು ಸರ್ಕಾರ ಹೊರ ಟಿದೆ. ಸಮೀಕ್ಷೆಗೆ ಸಿದ್ಧಪಡಿಸಿರುವ ಪರಿಶಿಷ್ಟ ಜಾತಿ ಗಳ ಪಟ್ಟಿಯಲ್ಲಿರುವ ಎಸ್‌ಸಿ ಕ್ರೈಸ್ತ ಜಾತಿಗಳನ್ನು ಸರ್ಕಾರ ಕೂಡಲೇ ಕೈ ಬಿಡ ಬೇಕು. ಇಲ್ಲವಾದರೆ ಎಲ್ಲಾ ಜಿಲ್ಲೆಗಳಲ್ಲಿ ದಲಿತರು ಬೀದಿಗಿಳಿದು ಹೋರಾಟ ಮಾಡಲಾಗುವುದೆಂದು ಎಚ್ಚರಿಸಿದರು.

## ಜಿಎಸ್‌ಟಿ ಇಳಿಕೆ ಜನರಿಗೆ ಉಡುಗೊರೆ: ಹೆಚ್.ಕೆ.ಸುರೇಶ್

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸರ್ಕಾರ ಜಿಎಸ್‌ಟಿ ದರ ಇಳಿಕೆ ಮಾಡುವ ಮೂಲಕ ರಾಷ್ಟ್ರದ ಜನರಿಗೆ ಭರ್ಜರಿ ಉಡುಗೊರೆ ನೀಡಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದಿನ ನಾಲ್ಕು ಶ್ರೇಣಿಯ ಜಟಿಲ ಜಿಎಸ್‌ಟಿ ವ್ಯವಸ್ಥೆ (ಶೇ.5, 12, 18, 28) ಬದಲಾಗಿ ಸರಳವಾದ ಕೇಲವ 2 ಶ್ರೇಣಿ (ಶೇ.5, 18) ವ್ಯವಸ್ಥೆ ಜಾರಿ ಮಾಡಲಾಗಿದೆ. ಶೇ.12 ದರದಲ್ಲಿದ್ದ ಶೇ.99 ರಷ್ಟು ಸರಕು ಮತ್ತು ಸೇವೆಗಳ ದರದಲ್ಲಿ ಭಾರೀ ಕಡಿತವಾಗಿದೆ. ಶೇ.28 ರಷ್ಟಿದ್ದ ಜಿಎಸ್‌ಟಿ ದರದಲ್ಲಿ ಶೇ.90 ರಷ್ಟು ದರ ಕಡಿತವಾಗಿದೆ ಎಂದು ತಿಳಿಸಿದರು.

ಒಂದು ದೇಶ, ಒಂದು ತೆರಿಗೆ ವ್ಯವಸ್ಥೆಯಿಂದ ದೇಶದ ಆರ್ಥಿಕ ದೃಷ್ಟಿಕೋನ ಬದಲಾಗಿದೆ. ಎಲ್ಲಾ ರಾಜ್ಯಗಳ ಸರ್ವಾನುಮತದಿಂದ ಜಾರಿಗೆ ತಂದ ಜಿಎಸ್‌ಟಿಯಿಂದ ಭಾರತದ ಆರ್ಥಿಕತೆಯನ್ನು ನೆಲಮಟ್ಟ ದಿಂದ ಬಲಪಡಿಸಲಾಗುತ್ತಿದೆ. ತೆರಿಗೆ ಇಳಿಕೆಯಿಂದ ಗ್ರಾಹಕರಿಂದ ಖರೀದಿ, ಬೇಡಿಕೆ ಮತ್ತು ಉತ್ಪಾದನೆಯಲ್ಲಿ ಏರಿಕೆಯಾಗಲಿದೆ. ಉದ್ಯೋಗವೂ ಹೆಚ್ಚಾಗಲಿದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಮಾತನಾಡಿ,




ಯುಪಿಎ ಸರ್ಕಾರದಿಂದ ನೆಲ ಕಚ್ಚಿದ್ದ ದೇಶದ ಆರ್ಥಿಕತೆಯನ್ನು ಒಂದು ದಶಕದ ಪರಿಶ್ರಮದಿಂದ ಭಾರತದ ಆರ್ಥಿಕತೆ ಪುನರುತ್ಥಾನಗೊಂಡಿದೆ. 2017ರಲ್ಲಿ65 ಲಕ್ಷ ತೆರಿಗೆದಾರರಿದ್ದರು. ಈಗ 1.51 ಕೋ.ರೂ.ಗೆ ತಲುಪಿದೆ. 2018ರ ಆರ್ಥಿಕ ವರ್ಷದಲ್ಲಿ 7.19 ಲಕ್ಷ ಕೋ.ರೂ. ತೆರಿಗೆ ಸಂಗ್ರಹವಾಗಿತ್ತು. 2025ರಲ್ಲಿ 22.08 ಲಕ್ಷ ಕೋ.ರೂ.ಗೆ ತಲುಪಿದೆ ಎಂದು ಹೇಳಿದರು.

ಹಾಲು, ಡೇರಿ ಅಗತ್ಯ ವಸ್ತುಗಳು ಜಿಎಸ್‌ಟಿಯಿಂದ ಮುಕ್ತವಾಗಿವೆ. ದಿನಸಿ ಪದಾರ್ಥಗಳ ಮೇಲಿನ ತೆರಿಗೆಯನ್ನು ಶೇ.12 ರಿಂದ 5ಕ್ಕೆ ಇಳಿಸಲಾಗಿದೆ. ಕಾರು, ಫ್ರಿಡ್ಜ್, ಎಸಿ ಮೇಲಿನ ತೆರಿಗೆಯನ್ನು ಶೇ.28ರಿಂದ 18ಕ್ಕೆ ಇಳಿಸಲಾಗಿದೆ. ರೈತರಿಗೆ ನೆರವು ನೀಡುವ ನಿಟ್ಟಿನಲ್ಲಿ ಟ್ರ್ಯಾಕ್ಟರ್, ಹನಿ ನೀರಾವರಿ, ಸ್ಪ್ರಿಂಕ್ಲರ್,ಕೊಯ್ಲು ಮಾಡುವ ಯಂತ್ರಗಳ ಮೇಲಿನ ಜಿಎಸ್‌ಟಿಯನ್ನು ಶೇ.5ಕ್ಕೆ ಇಳಿಸಲಾಗಿದೆ. ವೈದ್ಯಕೀಯ ಮೇಲಿನ ತೆರಿಗೆಯನ್ನು ಶೂನ್ಯಕ್ಕೆ ಇಳಿಸಲಾಗಿದೆ. ಆರೋಗ್ಯ ವಿಮೆ ಮತ್ತು ಜೀವವಿಮೆಗೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡಲಾಗಿದೆ. 33 ಜೀವ ಉಳಿಸುವ ಔಷಧಿಗಳ ಮೇಲಿನ ಜಿಎಸ್‌ಟಿಯನ್ನು ಶೇ.12ರಿಂದ ಶೂನ್ಯಕ್ಕೆ ಇಳಿಸಲಾಗಿದೆ ಎಂದು ತಿಳಿಸಿದರು.

ಶಾಸಕ ಸಿಮೆಂಟ್ ಮಂಜು, ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಮುಖಂಡರಾದ ಚಂದ್ರು, ಚೇತನ್ ಹಾಜರಿದ್ದರು.

## ಗಾಯಕ ಬಾಬು ನಿಧನ

• ಪ್ರಜೋದಯ ವರದಿ



**ಹಾಸನ:** ನಮ್ಮ ಊರು ಹಾಸನ-ಶಿಲ್ಪಕಲೆಯ ಶಾಸನ ಎಂಬ ಗಾಯನದ ಮೂಲಕ ಮನೆ ಮಾತಾಗಿದ್ದ ಗಾಯಕ ಬಾಬು (70) ಅವರು ಭಾನುವಾರ ರಾತ್ರಿ ನಿಧನರಾದರು.

ಕಳೆದ ಹಲವು ವರ್ಷಗಳಿಂದ ಬೆಂಗಳೂರಿನ ತಮ್ಮ ಮಗನ ಮನೆಯಲ್ಲೇ ವಿಶ್ರಾಂತ ಜೀವನ ನಡೆಸುತ್ತಿದ್ದರು. ಮೃತರು ಪತ್ನಿ ಸುಜಾತ, ಮಗ ಆರ್. ಭಾರದ್ವಾಜ್ ಮತ್ತು ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ನಾಗರ ಬಾವಿಯ ಹಿಂದೂ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿತು.

ನಮ್ಮ ಊರು ಹಾಸನ ಶಿಲ್ಪ ಕಲೆಯ ಶಾಸನ ಎಂಬ ಹಾಡಿನ ಮೂಲಕ ಜಿಲ್ಲೆಯ ವೈಶಿಷ್ಟ್ಯಗಳನ್ನು ಹಾಡಿ ಹೊಗಳುತ್ತಿದ್ದ ಕಲಾವಿದ ಬಾಬು ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ನಾಯಕರಹಳ್ಳಿ ಮಂಜೇಗೌಡ, ಗೌರವಾಧ್ಯಕ್ಷ ರವಿನಾಕಲಗೂಡು, ಕಲ್ಲಹಳ್ಳಿ ಹರೀಶ್, ಕತ್ತಿಮಲ್ಲೇನಹಳ್ಳಿ ಪರಮೇಶ, ಹರಳಹಳ್ಳಿ ರಂಗಸ್ವಾಮಿ, ಸೋಮನಾಯಕ್, ದಿಬ್ಬೂರು ರಮೇಶ್, ಪುಟ್ಟಣ್ಣ ನಂದಕುಮಾರ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರಾ, ನಾಯಕರಹಳ್ಳಿ, ಉಪಾಧ್ಯಕ್ಷ ಗುಡುಗನಹಳ್ಳಿ ಮಂಜುನಾಥ ಸಂತಾಪ ಸೂಚಿಸಿದ್ದಾರೆ.

## ಶಿಲುಬೆ ಬೆಟ್ಟದಲ್ಲಿ ಗಣಿಗಾರಿಕೆ ತಡೆಗೆ ಆಗ್ರಹ

» **ಮೊದಲನೇ ಪುಟದಿಂದ**

ಶಿಲುಬೆ ಬೆಟ್ಟ ಕ್ರೈಸ್ತರ ಧಾರ್ಮಿಕ ಕೇಂದ್ರವಾಗಿದ್ದು, ಶಿಲುಬೆ ಬೆಟ್ಟದಲ್ಲಿ ಅಕ್ರಮವಾಗಿ ಬ್ಲಾಸ್ಟಿಂಗ್ ಮಾಡುವುದರಿಂದ ಮನೆಗಳು ಬಿರುಕು ಬಿಟ್ಟು ವಾಸ ಮಾಡಲು ತೊಂದರೆ ಆಗುತ್ತಿದೆ ಎಂದು ಆರೋಪಿಸಿದರು.

ಇದು ಕಾಡಾನೆ ಸಂಚರಿಸುವ ಜಾಗವಾಗಿದ್ದು, ಇದರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದರೆ ಕೆಲವರು ಪ್ರಕರಣವನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಭೋವಿ ಸಮಾಜದವರು ಜಾತಿ ನಿಂದನೆ ಮಾಡುತ್ತಿದ್ದಾರೆಂದು ಆರೋಪಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿರುವುದು ಸೂಕ್ತವಲ್ಲ. ಹಾಗೆಯೇ ಹೋರಾಟಗಾರರ ವಿರುದ್ಧ ಸಲ್ಲಿಸಿರುವ ದೂರನ್ನು ವಾಪಾಸ್ ಪಡೆಯಬೇಕೆಂಬುದು ಆಗ್ರಹಿಸಿದರು.

ಮಗ್ಗೆ ಚರ್ಚ್ ಧರ್ಮಗುರು ಫಾದರ್ ಪ್ರಶಾಂತ್, ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು, ಕರ್ನಾಟಕ ರಕ್ಷಣಾ ವೇದಿಕೆ ಮಹಿಳಾ ಘಟಕದ ಅಧ್ಯಕ್ಷೆ ಸುಧಾ ಗಿರೀಶ್, ತಾಲ್ಲೂಕು ಅಧ್ಯಕ್ಷ ಹೆಚ್.ಕೆ.ದಿನೇಶ್, ಉಪಾಧ್ಯಕ್ಷ ವೆಂಕಟೇಶ್‌ಗೌಡ, ಅರುಣ್ ಭಾಸ್ಕರ್, ಅಶೋಕ್, ಪುನೀತ್, ಜ್ಯೋತಿ, ಪುಷ್ಪ ಇದ್ದರು.

### ಹಿಮ್ಸ್ ಆಸ್ಪತ್ರೆ ವೈದ್ಯನ ಎಡವಟ್ಟು: ಅಸಹಾಯಕ ಸ್ಥಿತಿಯಲ್ಲಿ ಮಹಿಳೆ

# ಎಡಗಾಲಿನ ಬದಲು ಬಲಗಾಲಿಗೆ ಶಸ್ತ್ರಚಿಕಿತ್ಸೆ

• ಪ್ರಜೋದಯ ವರದಿ

**ಹಾಸನ:** ನಗರದ ಹಿಮ್ಸ್ ಆಸ್ಪತ್ರೆ ವೈದ್ಯರ ಎಡವಟ್ಟಿನಿಂದ ಮಹಿಳೆ ತನ್ನ ಎರಡು ಕಾಲುಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಚಿಕ್ಕಮಗಳೂರು ಜಿಲ್ಲೆ ಸಿಂದಿಗೇರಿ ಸಮೀಪದ ಬೋಚನಹಳ್ಳಿ ಕಾವಲು ಗ್ರಾಮದ ಜ್ಯೋತಿ ಎಂಬುವವರಿಗೆ ಎರಡೂವರೆ ವರ್ಷದ ಹಿಂದೆ ನಡೆದ ಅಪಘಾತದ ವೇಳೆ, ಎಡಗಾಲು ಮೂಳೆ ಮುರಿದಿದ್ದರಿಂದ ವೈದ್ಯರು ರಾಡು ಅಳವಡಿಸಿದ್ದರು. ಇತ್ತೀಚೆಗೆ ಕಾಲಿನಲ್ಲಿ ನೋವು ಕಾಣಿಸಿಕೊಂಡಿದ್ದರಿಂದ ಈ ಹಿಂದೆ ಅಳವಡಿಸಿದ್ದ ರಾಡನ್ನು ತೆಗೆಸುವಂತೆ ವೈದ್ಯರು ತಿಳಿಸಿದ್ದರು.

ಜ್ಯೋತಿ ಅವರು ರಾಡು ತೆಗೆಸಲು ನಗರದ ಹಿಮ್ಸ್ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಗೆ ದಾಖಲಾಗಿದ್ದರು. ಹಿಮ್ಸ್ ಆಸ್ಪತ್ರೆ ಮೂಳೆ ವೈದ್ಯ ಡಾ||ಸಂತೋಷ್ ಅವರು ಮಹಿಳೆಯಿಂದ ಮಾಹಿತಿ ಪಡೆದು ಕೊಳ್ಳದೆ, ಎಕ್ಸರೇಯನ್ನೂ ಪರಿಶೀಲಿಸದೆ ಏಕಾಏಕಿ ಎಡಗಾಲಿನ ಬದಲು, ಬಲಗಾಲು ಕೊಯ್ದಿದಿದ್ದಾರೆ.

ವೈದ್ಯ ಡಾ||ಸಂತೋಷ್ ಅವರು ಮಾಡಿದ ಎಡವಟ್ಟು ಕಂಡು ದಿಗ್ಭ್ರಮೆ ಗೊಂಡ ಮಹಿಳೆ, ರಾಡ್ ಇರುವುದು ಎಡಗಾಲಿನಲ್ಲಿ ಎಂದು



ತಿಳಿಸಿದಾಗ ಪುನಃ ಎಡಗಾಲಿನ ಶಸ್ತ್ರಚಿಕಿತ್ಸೆ ನಡೆಸಿ, ರಾಡ್‌ನ್ನು ಹೊರತೆಗೆದಿದ್ದಾರೆ. ಒಂದು ಕಾಲಿನ ಸಮಸ್ಯೆ ನಿವಾರಣೆ ಮಾಡಿಕೊಳ್ಳಲು ಬಂದ ಮಹಿಳೆ ಈಗ ತನ್ನ ಎರಡು ಕಾಲುಗಳಿಗೆ ಶಸ್ತ್ರಚಿಕಿತ್ಸೆ ಮಾಡಿಸಿ ಕೊಂಡು ಹಾಸಿಗೆ ಹಿಡಿಯುವಂತಾಗಿದೆ.

ಮಹಿಳೆಗೆ ಇಬ್ಬರು ಚಿಕ್ಕ ಮಕ್ಕಳಿದ್ದು, ಕೂಲಿ ಮಾಡಿಕೊಂಡು ಜೀವನ ಸಾಗಿಸಬೇಕಿತ್ತು. ಆದರೀಗ ನಡೆಯಲು ಸಾಧ್ಯವಾಗದೆ ಅಸಹಾಯಕ ಸ್ಥಿತಿಯಲ್ಲಿ ಕಣ್ಣೀರಿಡುತ್ತಿ ದ್ದಾರೆ. ಈ ಬಗ್ಗೆ ವೈದ್ಯರನ್ನು ಪ್ರಶ್ನಿ ಸಿದರೆ, ಬಲಗಾಲಿನಲ್ಲಿ ಗಂಟಿತ್ತು. ಅದಕ್ಕಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದು, ತಮ್ಮ ಕುಟುಂಬಸ್ಥರಿಗೆ ತಿಳಿಸಿ ಎಂದು ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ.

ಸಂತ್ರಸ್ತೆಯ ತಾಯಿ ಮಾತ ನಾಡಿ, ನಾವು ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇವೆ. ವೈದ್ಯರು ಮಾಡಿದ ಎಡವಟ್ಟಿನಿಂದ ನನ್ನ ಮಗಳು ನಡೆದಾಡಲು ಸಾಧ್ಯವಾಗದ ಸ್ಥಿತಿಗೆ ತಲುಪಿದ್ದಾಳೆ. ಚಿಕ್ಕಮಕ್ಕಳನ್ನು ಇಟ್ಟುಕೊಂಡು ಜೀವನ ನಡೆಸುವುದು ಹೇಗೆಂದು ಕಣ್ಣೀರಿಟ್ಟಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಹಿಮ್ಸ್ ನಿರ್ದೇಶಕ ಡಾ||ರಾಜಣ್ಣ ಅವರು, ಮಂಗಳವಾರ ಡಾ|| ಸಂತೋಷ್ ಅವರ ವಿಚಾರಣೆ ನಡೆಸುವುದಾಗಿ ತಿಳಿಸಿದ್ದಾರೆ.

## ದ್ವೇಷ, ಅಸಹಿಷ್ಣುತೆ ನಾಶವಾಗಲಿ

» **ಮೊದಲನೇ ಪುಟದಿಂದ**

ದೇವಿ ಚಾಮುಂಡಿಯೇ ನನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದಾಳೆಂದು ಮಾತು ಆರಂಭಿಸಿದ ಬಾನು ಮುಷ್ತಾಕ್ ಅವರು, ಪ್ರಜಾಪ್ರಭುತ್ವ ಒಂದು ವ್ಯವಸ್ಥೆಯಲ್ಲ. ಅದೊಂದು ಮೌಲ್ಯ. ಅದನ್ನು ಗೌರವಿಸೋಣ. ಈ ನೆಲದಲ್ಲಿ ಸೌಹಾರ್ದದ ಕುರುಹುಗಳಿವೆ. ಇಲ್ಲಿನ ಬಿಸಿಲು ಕೂಡ ಮಾನವೀಯತೆಯ ಪ್ರತೀಕವಾಗಿದೆ. ದೇವಿ ಚಾಮುಂಡಿ ನಮ್ಮೊಳಗಿನ ದ್ವೇಷ, ಅಸಹಿಷ್ಣುತೆಯನ್ನು ನಾಶ ಮಾಡಲಿ. ದಸರಾ ಮೈಸೂರು ನಗರ, ನಾಡು ಹಾಗು ದೇಶಕ್ಕಷ್ಟೇ ಸೀಮಿತವಾಗದೆ, ಇಡೀ ಜಗತ್ತಿನಾದ್ಯಂತ ಶಾಂತಿ, ಸೌಹಾರ್ದ, ಪ್ರೀತಿಯ ದೀಪವಾಗಿ ನೆಲೆ ಕಂಡುಕೊಳ್ಳಲಿ ಎಂದರು.

ಸರ್ವ ಜನಾಂಗದ ತೋಟವಾದ ನಾಡಿನಲ್ಲಿ ಪ್ರತಿ ಹೂ ತನ್ನ ಬಣ್ಣದಲ್ಲೇ ಅರಳಲಿ, ತನ್ನ ಸುವಾಸನೆಯನ್ನೇ ಬೀರಲಿ, ಪ್ರತಿ ಹಕ್ಕಿ ತನ್ನ ರಾಗದಲ್ಲೇ ಹಾಡಲಿ. ಆದರೆ, ಎಲ್ಲವೂ ಒಟ್ಟಾದಾಗ ಸೌಹಾರ್ದದ ಹಾಡಾಗಲಿ. ನಾವೆ ಲ್ಲರೂ ಒಂದೇ ಗಗನದ ಅಡಿಯ ಪಯಣಿಗರು. ಆಕಾಶ ಯಾರನ್ನೂ ಬೇರ್ಪ ಡಿಸುವುದಿಲ್ಲ. ಭೂಮಿಯು ಯಾರನ್ನೂ ಹೊರತಳ್ಳುವುದಿಲ್ಲ. ಮನುಷ್ಯರು ಮಾತ್ರ ಗಡಿಗಳನ್ನು ಸೃಷ್ಟಿಸುತ್ತಾರೆಂದು ವಿಷಾದಿಸಿದ ಅವರು, ಸೌಹಾರ್ದ, ಸಮಾನತೆಗಾಗಿ ಶ್ರಮಿಸಿದ ಜಯಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗು ಅಂಬೇಡ್ಕರ್ ಅವರನ್ನು ಉಲ್ಲೇಖಿಸಿ ಗಮನ ಸೆಳೆದರು.

ದಸರೆ ಎಂದರೆ ಹಬ್ಬವಷ್ಟೇ ಅಲ್ಲ. ನಾಡಿನ ನಾಡಿ ಮಿಡಿತ, ಸಂಸ್ಕೃತಿಯ ಉತ್ಸವ. ಇದು ಎಲ್ಲರನ್ನೂ ಒಳಗೊಳ್ಳುವ ಘಳಿಗೆ. ಸಮನ್ವಯ ಮೇಳ ವಿವಿಧತೆಯಲ್ಲಿ ಏಕತೆ ಇರುವ ಸುಗಂಧ ಎಂದು ಬಣ್ಣಿಸಿದರು. ನವರಾತ್ರಿಯಲ್ಲಿ ಉರ್ದು ಭಾಷಿಕರು ತಮ್ಮ ಗುರುತನ್ನು ಕೊಟ್ಟಿದ್ದಾರೆ. ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳದಲ್ಲಿ ವಾಸವಿದ್ದ ನನ್ನ ಆಪ್ತ ಸಂಬಂಧಿ ಮೊಹಮದ್ ಗೌಸ್ ಎಂಬುವವರು ಮೈಸೂರು ಮಹಾರಾಜರ ಅಂಗರಕ್ಷಕ ಪಡೆಯ ಸೈನಿಕರಾಗಿದ್ದರು. ಅಂಥ ಹಲವರು ಅಂಗರಕ್ಷಕ ಪಡೆಯಲ್ಲಿದ್ದರು. ಜಯಚಾಮರಾಜೇಂದ್ರ ಒಡೆಯರ್ ಮುಸ್ಲಿಮರನ್ನು ನಂಬಿ ಅಂಗರಕ್ಷಕ ಪಡೆಗೆ ನೇಮಿಸಿಕೊಂಡಿದ್ದರು. ಇದು ಅವಿಸ್ಮರಣೀಯವಾದ ಹೆಮ್ಮೆ ಎಂದು ಸ್ಮರಿಸಿದರು.



ಆಲೂರು: ತಾಲ್ಲೂಕಿನ ಮಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಲ್ಲೂರು ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಸೋಮವಾರ ಶಾಸಕ ಸಿಮೆಂಟ್ ಮಂಜು ಅವರು ಭೇಟಿ ನೀಡಿ ಮೂಲಭೂತ ಸೌಕರ್ಯಗಳು ಮತ್ತು ಕುಂದು ಕೊರತೆಗಳ ಪರಿಶೀಲನೆ ನಡೆಸಿದರು.

## ಬಾಗಿಲು ಮುರಿದು ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಬಾಣಾವರದಲ್ಲಿ ನಡೆದಿದೆ.

ಪಟ್ಟಣ ಪೊಲೀಸ್ ಠಾಣೆ ಹಿಂಭಾಗದ ನಿವಾಸಿ ಅಜ್ಮಲ್ ಖಾನ್ ಎಂಬುವವರ ಮನೆಯಲ್ಲಿ ಕಳ್ಳತನವಾಗಿದೆ. ಸೆ.20ರಂದು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸದಸ್ಯರೆಲ್ಲರೂ ಕಡೂರಿಗೆ ತೆರಳಿದ್ದರು. ಮಾರನೇ ದಿನ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 40 ಗ್ರಾಂ ತೂಕದ ಚಿನ್ನದ ಲಾಂಗ್ ಚೈನ್, 20 ಗ್ರಾಂ ತೂಕದ ಚಿನ್ನದ ನೆಕ್ಲೆಸ್ ಹಾಗು 2 ಲಕ್ಷ ರೂ. ನಗದು ಕದ್ದಿದ್ದಾರೆ. ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹಾಸನ ರೆಡ್‌ಕ್ರಾಸ್ ರಾಜ್ಯಕ್ಕೆ ಮಾದರಿ: ಡಿ.ಸಿ.

• ಪ್ರಜೋದಯ ವರದಿ

**ಹಾಸನ:** ವರ್ಷಕ್ಕೆ 60 ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಹಾಸನ ರೆಡ್ ಕ್ರಾಸ್ ಸಂಸ್ಥೆ ರಾಜ್ಯಕ್ಕೆ ಮಾದರಿಯಾಗಿದೆ ಎಂದು ಜಿಲ್ಲಾ ರೆಡ್‌ಕ್ರಾಸ್ ಅಧ್ಯಕ್ಷೆ ಕೆ.ಎಸ್. ಲತಾಕುಮಾರಿ ಅವರು ಹೇಳಿದರು.

ನಗರದ ಸಾಲಗಾಮೆ ರಸ್ತೆಯಲ್ಲಿರುವ ಭಾರತೀಯ ರೆಡ್‌ಕ್ರಾಸ್ ಕಚೇರಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸರ್ವ ಸದಸ್ಯರ ಸಭೆ ಉದ್ಘಾಟಿಸಿ ಮಾತನಾಡಿ, ಹಾಸನ ರೆಡ್ ಕ್ರಾಸ್ 2024ರ ಏಪ್ರಿಲ್‌ನಿಂದ 2025ರ ಮಾರ್ಚ್‌ವರೆಗೆ 60 ಕಾರ್ಯಕ್ರಮ ನಡೆಸಿರುವುದು ಶ್ಲಾಘನೀಯ. ನಾನು ಸಾಕಷ್ಟು ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದೇನೆ. ರೆಡ್‌ಕ್ರಾಸ್ ಘಟಕ ಇಷ್ಟೊಂದು ಕ್ರಿಯಾಶೀಲವಾಗಿರುವುದನ್ನು ನೋಡಿಲ್ಲವೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾಡಳಿತದಿಂದ ಪ್ರತಿ ತಿಂಗಳು ಎರಡು ಬಾರಿ ರಸ್ತೆ ಸುರಕ್ಷತಾ ಕಾರ್ಯಕ್ರಮ ಮಾಡುತ್ತೇವೆ. ಈ ನಿಟ್ಟಿನಲ್ಲಿ ರೆಡ್‌ಕ್ರಾಸ್ ಪದಾಧಿಕಾರಿಗಳು ನೀಡಿದ ಸಲಹೆಗಳು ನಮಗೆ ನೆರವಾ ಗಿವೆ.




ಶಾಲಾ- ಕಾಲೇಜುಗಳಲ್ಲಿ ರಕ್ತ ದಾನದ ಅರಿವು ಮೂಡಿಸುವುದು. ಅಪಘಾತ ತಡೆಗಟ್ಟುವಿಕೆಯಲ್ಲಿ ಕೈಗೊಳ್ಳ ಬೇಕಾದ ಕ್ರಮಗಳ ಕುಳಿತು ಉತ್ತಮ ಸಲಹೆ ನೀಡಿದ್ದಾರೆ. ರೆಡ್‌ಕ್ರಾಸ್ ಇಷ್ಟೆಲ್ಲಾ ಕ್ರಿಯಾಶೀಲವಾ ಗಿರಲು ಇಲ್ಲಿನ ಪ್ರತಿ ಸದಸ್ಯರ ಕೊಡುಗೆ ಮಹತ್ವದ್ದಾಗಿದೆ. ಮುಂದಿನ ದಿನಗಳಲ್ಲೂ ಇದೇ ರೀತಿ ಒಳ್ಳೆಯ ಕೆಲಸ ಮುಂದುವರಿಯಲಿ ಎಂದು ಶುಭ ಹಾರೈಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಮಾತನಾಡಿದರು.

ಅಂಗವಿಕಲರಿಗೆ ಮೂರು ಚಕ್ರದ ವಾಹನಗಳ ವಿತರಿಸಲಾಯಿತು. ರೆಡ್‌ಕ್ರಾಸ್ ನಿರ್ದೇಶಕರು ಹಾಗು ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಲಾಯಿತು.

ರೆಡ್‌ಕ್ರಾಸ್ ಸಭಾಪತಿ ಹೆಚ್.ಪಿ. ಮೋಹನ್, ನಿರ್ದೇಶಕರಾದ ಎಸ್. ಎಸ್.ಪಾಷಾ, ಅಮ್ಜದ್ ಖಾನ್, ಬಿ.ಆರ್.ಉದಯಕುಮಾರ್, ಕೆ.ಟಿ.ಜಯಶ್ರೀ, ಡಾ||ಎ.ಸಾವಿತ್ರಿ, ಡಾ||ಭಾರತೀ ರಾಜಶೇಖರ್, ಡಾ|| ರಂಗಲಕ್ಷ್ಮಿ, ಡಾ||ಅಬ್ದುಲ್ ಬಷೀರ್, ಕುಮಾರ್ ಇತರರಿದ್ದರು.

## ಹಿರೀಸಾವೆ: ದಸರಾ ಉತ್ಸವಕ್ಕೆ ಚಾಲನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಗ್ರಾಮದೇವತೆ ಶ್ರೀ ಚೌಡೇಶ್ವರಿ ದೇವಿಯ ನವರಾತ್ರಿ ಆಚರಣೆ ಮತ್ತು ದಸರಾ ಮಹೋತ್ಸವಕ್ಕೆ ಉಯ್ಯಾಲೆ ಕಂಬದ ಬಳಿ ಸೋಮವಾರ ಜನಪ್ರತಿನಿಧಿಗಳು, ಗಣ್ಯರು ಹಾಗೂ ಮುಖಂಡರು ಚಾಲನೆ ನೀಡಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಸಾವಿರಾರು ವರ್ಷಗಳ ಇತಿಹಾಸವಿರುವ ಗ್ರಾಮಕ್ಕೆ ಒಂದು ಸಾವಿರ ವರ್ಷದ ಹಿಂದೆ ನಿರ್ಮಾಣವಾಗಿರುವ ಉಯ್ಯಾಲೆ ಕಂಬವೇ ಸಾಕ್ಷಿಯಾಗಿದೆ ಎಂದರು.

ಗ್ರಾಮದ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿಗೆ ಸಹಕಾರ ನೀಡುವೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಈ ವರ್ಷ ಮಳೆ ಕೊರತೆಯಿಂದ ರಾಗಿ, ತೆಂಗು ಸೇರಿ ಹಲವು ಬೆಳೆಗಳು ಹಾನಿಯಾಗಿದೆ. ಈ ಬಗ್ಗೆ ಸರ್ಕಾರದ ಗಮನಸೆಳೆಯುವುದಾಗಿ ತಿಳಿಸಿದರು.

ಕಾಂಗ್ರೆಸ್ ಮುಖಂಡ ಎಂ.ಎ. ಗೋಪಾಲಸ್ವಾಮಿ ಅವರು ಮಾತನಾಡಿ, ದಸರಾ ಉತ್ಸವವು ನಮ್ಮ ದೇಶದ ಹಿಂದು ಧಾರ್ಮಿಕ ಆಚರಣೆ ಮತ್ತು ಸಾಂಸ್ಕೃತಿಕದ ಸಂಕೇತವಾಗಿದೆ. ಭಕ್ತಿ ಭಾವ ದಿಂದ ಸಪ್ತಮಾತೃಕೆಯ ದೇವಿಯರ ಪೂಜೆ ಮಾಡಬೇಕೆಂದರು.



ಪ್ರತಿ ವರ್ಷದಂತೆ ಈ ವರ್ಷವು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನವರಾತ್ರಿ ಆಚರಣೆ ನಡೆಯಲಿದೆ. ಅದ್ದೂರಿ ದಸರಾ ಯಶಸ್ವಿಗೆ ಗ್ರಾಮದ ಎಲ್ಲರೂ ಸಹಕಾರ ನೀಡಬೇಕೆಂದು ಧರ್ಮದರ್ಶಿ ಹೆಚ್.ವಿ.ಫಣೀಶ್ ಹೇಳಿದರು. ನವರಾತ್ರಿ ಪ್ರಾರಂಭದ ಅಂಗವಾಗಿ ಇಲ್ಲಿನ ಚೌಡೇಶ್ವರಿ ದೇವಿಗೆ ಮೊದಲ ದಿನ ವಿಶೇಷ ಪೂಜೆ ಸಲ್ಲಿಸಲಾಯಿತು.

ವಿದ್ಯುತ್ ಕಾರ್ಖಾನೆ ಅಧ್ಯಕ್ಷ ಎಚ್.ಸಿ.ಲಲಿತ ರಾಘವ್, ಬಿಎಲ್‌ಡಿಬಿ ಅಧ್ಯಕ್ಷ ಬಿ.ಎನ್.ಮಂಜುನಾಥ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಯಮ್ಮ ಬೋರಯ್ಯ, ಸದಸ್ಯರಾದ ಮಾರುತಿ ಮಂಜುನಾಥ್, ಬೋರಣ್ಣ, ಚೇತು, ಪಿಡಿಒ ಸತೀಶ್, ಪಿಎಸಿಸಿಬಿ ಅಧ್ಯಕ್ಷ ಮಹೇಶ್, ಸೊಸೈಟಿ ಹರೀಶ್, ದೇವಸ್ಥಾನ ಮುಖ್ಯಸ್ಥರಾದ ಅನಂತ ರಾಮಯ್ಯ, ಗ್ರಾಮದ ಮುಖಂಡರಾದ ಅರಳಿಮರದ ಕುಮಾರ್, ರಾಮಕೃಷ್ಣ, ಎಚ್.ಎಸ್. ರವಿ ಕುಮಾರ್, ಬಾಲಕೃಷ್ಣ, ಉದಯ ಕುಮಾರ್, ಎಚ್.ಎಸ್.ಶ್ರೀಧರ್, ಮುರುಳೀಧರ್, ಎಚ್.ಜೆ.ದಿನೇಶ್, ಬೋರೇಗೌಡ, ವೆಂಕ ಟೇಶ್ ಬೀದಿಮನೆ ಶ್ರೀನಿವಾಸ್, ಕರವೇ ಮಹೇಶ್, ದಿವಾಕರ್, ಲೋಕೇಶ್ ಇತರರು ಭಾಗವಹಿಸಿದ್ದರು.

## ಕುಡಿಯುವ ನೀರಿನ ಘಟಕ ಸ್ಥಾಪನೆ

• ಪ್ರಜೋದಯ ವರದಿ

**ಸಕಲೇಶಪುರ:** ಆರೋಗ್ಯದ ದೃಷ್ಟಿಯಲ್ಲಿ ಜನತೆಗೆ ಶುದ್ಧ ನೀರು ಲಭ್ಯವಾಗುವುದು ಸಂತೋಷ ತರುವ ವಿಷಯವೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ತಾಲ್ಲೂಕಿನ ರಾಜಬೀದಿಯ ಎಲ್.ಎಂ.ರಸ್ತೆಯ ಸರ್ಕಲ್‌ನಲ್ಲಿ ನೂತನ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇಂದು ಎ.ಕೆ.ಸಾಗರ್ ವೃತ್ತದಲ್ಲಿ ಧ್ವಜಕಂಬ ಹಾಗೂ ಸಾರ್ವಜನಿಕರಿಗಾಗಿ ಕುಡಿಯುವ ನೀರಿನ ಘಟಕ ಸ್ಥಾಪನೆಯಾಗಿದೆ. ಇದು ಕೇವಲ ಅಭಿವೃದ್ಧಿ ಕೆಲಸವಲ್ಲ, ಸ್ಥಳೀಯ ವ್ಯಾಪಾರಸ್ಥರು ಹಾಗೂ ಸಂಘಟನೆಗಳ ಹೋರಾಟದ ಪ್ರತಿಫಲ ಎಂದು ಹೇಳಿದರು.

ನಾವು ಹುಟ್ಟಿದ ತಾಲ್ಲೂಕಿನಲ್ಲಿ ಒಳ್ಳೆಯ ಕೆಲಸ ಮಾಡಲು ಪ್ರತಿಯೊಬ್ಬರೂ ಬದ್ಧರಾಗಿರಬೇಕು. ನಗರದ ಶುದ್ಧತೆಯಿಂದಲೇ ಸಕಲೇಶಪುರ ಬೆಳೆದು ನಿಲ್ಲಬಹುದು. ಜನಪ್ರತಿನಿಧಿಗಳು ಹಾಗೂ ಸಂಘ ಸಂಸ್ಥೆಗಳ ಮುಂದಾಳತ್ವದಿಂದ ಮಾತ್ರ ಅಭಿವೃದ್ಧಿ ಪಥದಲ್ಲಿ ಸಾಗಲು ಸಾಧ್ಯ. ದೇಶ




ಸುಭೀಕ್ಷೆಯಾದರೆ ರಾಜ್ಯ ಸುಭೀಕ್ಷೆಯಾಗುತ್ತದೆ, ರಾಜ್ಯ ಸುಭೀಕ್ಷೆಯಾದರೆ ನಗರ, ಪಟ್ಟಣ ಹಾಗೂ ಹಳ್ಳಿಗಳ ಉದ್ಧಾರವಾಗುತ್ತದೆ. ಹೀಗಾಗಿ ಸಾರ್ವಜನಿಕರ ಅನುಕೂಲಕ್ಕಾಗಿ ಮಾಡುವ ಪ್ರತಿಯೊಂದು ಕೆಲಸ ಮಾಣಿಕ್ಯದಂತಿದೆ. ಅಧಿಕಾರ ಯಾರಿಗೂ ಶಾಶ್ವತವಲ್ಲ. ಆದ್ದರಿಂದ ನಮ್ಮ ಅಧಿಕಾರಾವಧಿಯಲ್ಲಿ ತಾಲ್ಲೂಕಿನ ಬೆಳವಣಿಗೆಗೆ ಪ್ರಾಮುಖ್ಯತೆ ನೀಡುವುದು ಅವಶ್ಯವೆಂದರು.

ಈ ಸಂದರ್ಭದಲ್ಲಿ ಪುರಸಭಾ ಸದಸ್ಯರಾದ ಸರಿತಾ ಗಿರೀಶ್, ಇಸ್ರಾರ್, ವನಜಾಕ್ಷಿ, ಪುರಸಭೆ ಮುಖ್ಯಾಧಿಕಾರಿ ಮಹೇ ಶ್ವರಪ್ಪ, ಕರವೇ ಅಧ್ಯಕ್ಷ ರಮೇಶ್ ಪೂಜಾರಿ, ವೀರಯೋಧ ಎ.ಕೆ.ಸಾಗರ್ ಸಂಘದ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷ ಜಮೀಲ್, ಕಾರ್ಯದರ್ಶಿ ಜಗದೀಶ್, ಪದಾಧಿಕಾರಿ ಗಳಾದ ಸಲೀಂ, ಚಿಂಟೂ ಹಾಗೂ ಕಾರ್ಯನಿರತ ಪತ್ರಕರ್ತ ಸಂಘದ ಅಧ್ಯಕ್ಷ ಜೈ ಭೀಮ್ ಮಂಜು ಇತರರು ಉಪಸ್ಥಿತರಿದ್ದರು.

### ಶಾಂತಿ ಪ್ರಕಾಶನ ವ್ಯವಸ್ಥಾಪಕ ಜನಾಬ್ ಮಹಮ್ಮದ್ ಕುಂಞ

# ನಿರ್ಭಯವಾಗಿ ಬದುಕಲು ಮಹನೀಯರ ಆದರ್ಶ ಅವಶ್ಯ

• ಪ್ರಜೋದಯ ವರದಿ

**ಅರೇಹಳ್ಳಿ:** ನಮ್ಮನ್ನು ಭಯಪಡಿಸುವವರ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ. ಆರೋಗ್ಯಕ್ಕಾಗಿ ಆಸ್ಪತ್ರೆಗೆ ಹೋಗಲು ಭಯ, ನ್ಯಾಯಕ್ಕಾಗಿ ವಕೀಲರನ್ನು ಸಂಪರ್ಕಿಸಲು ಭಯ, ರಾಜಕಾರಣಿಗಳ ಬಲವನ್ನು ಎದುರಿಸಲು ಭಯ, ಧಾರ್ಮಿಕ ಸಭೆಗಳಲ್ಲಿ ಧರ್ಮಗುರುಗಳ ಭಯ ಎಲ್ಲಾ ದಿಕ್ಕಿನಿಂದ ಭಯ ಆವರಿಸಿದೆ ಎಂದು ಶಾಂತಿ ಪ್ರಕಾಶನ ವ್ಯವಸ್ಥಾಪಕ ಜನಾಬ್ ಮಹಮ್ಮದ್ ಕುಂಞ ಅವರು ತಿಳಿಸಿದರು.

ಪಟ್ಟಣದ ಮುಖ್ಯರಸ್ತೆಯ ಹೀರಾ ಸೆಂಟರ್‌ನಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ವತಿಯಿಂದ ಹಮ್ಮಿಕೊಂಡಿದ್ದ ಪ್ರವಾದಿ ಮಹಮ್ಮದ್ (ಸ) ಸೀರತ್ ಅಭಿಯಾನ ಸಮಾವೇಶದಲ್ಲಿ ಮಾತನಾ ಡಿದ ಅವರು, ಇತಿಹಾಸದಲ್ಲಿ ಮಹಾನ್ ಪುರುಷರು, ಸಂತರು, ಪ್ರವಾದಿಗಳು, ಆಚಾರ್ಯರು ಜನ್ಮ ತಾಳಿ ಭರವಸೆಯ ಜೀವನದ ಪಾಠಗಳನ್ನು ನೀಡಿದ್ದಾರೆ. ಅವರ ಆದರ್ಶಗಳನ್ನು ಮೈಗೂಡಿಸಿಕೊಂಡರೆ ಮಾತ್ರ ನಿರ್ಭಯವಾಗಿ ಬದುಕಲು ಸಾಧ್ಯವೆಂದು ತಿಳಿಸಿದರು.

ಸಮಾಜದ ಬಡವರಿಂದ ಹಿಡಿದು ಶ್ರೀಮಂತರವರೆಗೆ ಎಲ್ಲರ ಪಾಲಿಗೆ ಅತ್ಯಂತ ಭರವಸೆ ಎಂದರೆ ನ್ಯಾಯ. ನ್ಯಾಯವಿಲ್ಲದಿದ್ದರೆ ಅರಾಜಕತೆ ಸೃಷ್ಟಿಯಾಗುತ್ತದೆ. ಅದಕ್ಕಾಗಿ ಪ್ರವಾದಿಗಳು ನ್ಯಾಯಕ್ಕೆ ಅತೀವ ಮಹತ್ವ ಕೊಟ್ಟಿದ್ದಾರೆ. ಇಂದಿನ ಕಾಲದಲ್ಲಿ ನಗರ-ಗ್ರಾಮ,



ದೇಶ-ವಿದೇಶಗಳ ನಡುವಿನ ಅಂತರ ಕಡಿಮೆಯಾಗಿದ್ದರೂ, ಮನುಷ್ಯ-ಮನುಷ್ಯರ ನಡುವಿನ ಅಂತರ ಮಾತ್ರ ಹೆಚ್ಚುತ್ತಿರುವುದು ಬೇಸರದ ಸಂಗತಿ. ಸಾಮರಸ್ಯ ಮತ್ತು ಸಹೋದರತ್ವದಿಂದ ಬದುಕಲು ಜನ ಜಾಗೃತಿ ಸಮಾವೇಶಗಳಲ್ಲಿ ಪಾಲ್ಗೊಳ್ಳಬೇಕೆಂದರು.

ಪಿಎಸ್‌ಐ ಶೋಭಾ ಭರಮಣ್ಣವರ್ ಅವರು ಮಾತನಾಡಿ, ಸಾಮರಸ್ಯ ಮತ್ತು ಸಹಬಾಳ್ವೆಯ ಸಂದೇಶಗಳನ್ನು ಮಕ್ಕಳಿಗೆ ಹಂಚಿದರೆ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಆಧುನಿಕ ತಂತ್ರಜ್ಞಾನ ಬೆಳೆದಂತೆ ಕಾನೂನಿನ ಅರಿವು ಕುಂದುತ್ತಿದೆ. ನ್ಯಾಯದ ಅರಿವು ಇದ್ದರೆ ಸಮಾಜದಲ್ಲಿ ಅಹಿತಕರ ಘಟನೆಗಳು ಸಂಭವಿಸುವುದಿಲ್ಲ. ಹಿಂದೆ ಒಂದು ಕುಟುಂಬದಲ್ಲಿ ಹತ್ತಾರು ಜನರು ಸಾಮರಸ್ಯದಿಂದ ಬದುಕುತ್ತಿದ್ದರು. ಈಗ ಮನೆಮನೆಗಳಲ್ಲಿ ಕಲಹ ಹೆಚ್ಚಾಗಿದೆ. ಆದ್ದರಿಂದ ಇಂತಹ ಸಮಾವೇಶಗಳಲ್ಲಿ ಭಾಗವಹಿಸಿ ಬಾಂಧವ್ಯದಿಂದ ಬದುಕುವುದನ್ನು ಕಲಿಯಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ಕಾರ್ಯದರ್ಶಿ ಮುಜೀಬ್ ಉರ್ ರಹಮಾನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಮುದಾಯ ಆರೋಗ್ಯ ಕೇಂದ್ರಕ್ಕೆ ಇತ್ತೀಚೆಗೆ ವೈದ್ಯಾಧಿಕಾರಿಗಳಾಗಿ ಆಗಮಿಸಿದ ಡಾ.ಅಕ್ಷತ್ ಶೆಟ್ಟಿ ಹಾಗು ಡಾ.ರಬಿಯಾ ರಹಮಾನ್ ಅವರನ್ನು ಸನ್ಮಾನಿಸಲಾಯಿತು.

ಜಮಾಅತೆ ಅಧ್ಯಕ್ಷ ಇಝಾರ್ ಅಸರ್ ಉಮ್ರಿ, ಕಾಲೇಜು ಉಪಪ್ರಾಂಶುಪಾಲ ಶಿವಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷೆ ರಶ್ಮಿ ಸೋಮಯ್ಯ, ಜಾಮಿಯ ಮಸ್ಜಿದ್ ಕಮಿಟಿ ಕಾರ್ಯದರ್ಶಿ ಹಾಮೀದ್ ಅಂಜುಮ್, ಕಾಫಿ ಬೆಳೆಗಾರರ ಸಂಘ ಅಧ್ಯಕ್ಷ ಶಾರಿಬ್ ಫರ್ಹಾನ್, ರೋಟರಿ ಅಧ್ಯಕ್ಷ ಪ್ರಸನ್ನ ಉಪಸ್ಥಿತರಿದ್ದರು.

## ಬಿ.ಡಿ. ಶ್ರೀಧರ್‌ಗೆ ಪಿಹೆಚ್.ಡಿ. ಪ್ರದಾನ

• ಪ್ರಜೋದಯ ವರದಿ



**ಹಾಸನ:** ಬೆಂಗಳೂರಿನ ಎಪಿಎಸ್ ಇಂಜಿನೀಯರಿಂಗ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಬಿ.ಡಿ.ಶ್ರೀಧರ್ ಅವರು ಆಂಧ್ರ ಪ್ರದೇಶದ ಕುಪ್ಪಂ ದ್ರಾವಿಡಿಯನ್ ವಿಶ್ವವಿದ್ಯಾನಿಲಯ ದಿಂದ ಪಿಹೆಚ್.ಡಿ. ಪದವಿಗೆ ಭಾಜನ ರಾಗಿದ್ದಾರೆ.

ವೆಲ್ಲೂರು ವೂಹೀಸ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಜೆ.ವಿಕ್ಟರ್ ಧನರಾಜ್ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಸೋಷಿಯಲ್ ಫಿಲಾಸಫಿ ಆಫ್ ಅಥ್ಲೆಟಿಕ್ಸ್ ಒರಿಜಿನ್ಸ್ ಅಂಡ್ ಆಸ್ಪೆಕ್ಟ್ಸ್ ಆಫ್ ಒಲಂಪಿಸಮ್ ಸ್ಪೋರ್ಟ್ಸ್ ಅಂಡ್ ಫಿಸಿಕಲ್ ಎಜುಕೇಶನ್, ಫಾಸ್ಟ್, ಪ್ರೆಸೆಂಟ್, ಪ್ಯೂಚರ್ ಎಂಬ ಪ್ರಬಂಧಕ್ಕೆ ಡಾಕ್ಟರೇಟ್ ದೊರೆತಿದೆ. ಬಿ.ಡಿ.ಶ್ರೀಧರ್ ಅವರು ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಬನ್ನಿಹಳ್ಳಿ ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಯಶೋಧಮ್ಮ ಮತ್ತು ದಿ||ಧರ್ಮಪ್ಪ ಅವರ ಪುತ್ರರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK